ಕೊರವಂಜಿ

Koravanji


ಮಾರ್ಚ್

೧೯೬೨

★

ಸಂಪಾದಕರು

ಶ್ರೀ॥ ರಾ. ಶಿ.



ಬರೆಹಗಾರರು:

- ಶ್ರೀ॥ ಬಚ್ಚು
- ಶ್ರೀ॥ ಕಾ. ರಾ.
- ಶ್ರೀ॥ ಅ. ರಾ. ಸೇ.
- ಶ್ರೀಮತಿ ನಾಗರತ್ನ
- ಶ್ರೀ॥ ರಾಮು
- ಶ್ರೀ॥ "ಕೇಫ"
- ಶ್ರೀ॥ ಅಮರನಾಥ್
- ಶ್ರೀ॥ ಪ್ರಸಾದ್
- ಶ್ರೀ ಹಾ. ಮ್ಯಾ. ಸೂಂ
- ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಚಿತ್ರ



— ವೈಟೋಫೆರಿನ್ —

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳು ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

ಗೀತಾ ಪಬ್ಲಿಕೇಷನ್ಸ್‌ರವರ ಪ್ರಕಟನೆಗಳು

ನಾಡಿಗೇರ ಕೃಷ್ಣರಾಯರ ಕಾದಂಬರಿ

ಪ್ರಣಯ ಕೋಲಾಹಲ

204 ಪುಟಗಳು ಬೆಲೆ 2-00

ಅ. ನ. ಕೃ. ರವರು ಬರೆದ ಕಾದಂಬರಿ

ಸ್ತ್ರೀಮುಖ ವ್ಯಾಘ್ರ

232 ಪುಟಗಳು ಬೆಲೆ 2-00

ಮ. ಶ್ರೀಧರಮೂರ್ತಿಗಳು ಬರೆದ ಕಾದಂಬರಿ

ಸುವರ್ಣ ಮೋಹಿನಿ

200 ಪುಟಗಳು ಬೆಲೆ 2-00

ಬೀchi ರವರು ಬರೆದ ಕಾದಂಬರಿ

ಮೇಡಮ್ಮನ ಗಂಡ

240 ಪುಟಗಳು ಬೆಲೆ 2-50

ಮ. ನ. ಮೂರ್ತಿಯವರ ಕಾದಂಬರಿ

ಆರಾಧಿತೆ

200 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಅಮರ ಸರಸ್ವತಿ

208 ಪುಟಗಳು ಬೆಲೆ 2-00

ಕೃಷ್ಣಮೂರ್ತಿ ಪುರಾಣಿಕರವರ ಕಾದಂಬರಿ

ಅಣ್ಣನ ಹೆಂಡತಿ

208 ಪುಟಗಳು ಬೆಲೆ 2-00

ವೈ. ಸು. ಶೇ. ರವರ ಕಾದಂಬರಿ

ಶುಭ ಸ್ವೀಕಾರ

200 ಪುಟಗಳು ಬೆಲೆ 2-00

ತ್ರಿವಿಕ್ರಮರವರ ಕಾದಂಬರಿ

ನಾಟ್ಯ ಕಸ್ತೂರಿ

208 ಪುಟಗಳು ಬೆಲೆ 2-00

ಅ. ನ. ಕೃ. ರವರ ಕಾದಂಬರಿ

ಅಮೃತ ಮಂಥನ

208 ಪುಟಗಳು ಬೆಲೆ 2-00

ನಾಡಿಗೇರ ಕೃಷ್ಣರಾಯರ ಕಾದಂಬರಿ

ನಾಲ್ಕು ಸುಂದರಿಯರು

208 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಅರಶಿನ ಕುಂಕುಮ

205 ಪುಟಗಳು ಬೆಲೆ 2-00

ಬೀChi ಯವರ ಕಾದಂಬರಿ

TENT ಸಿನೇಮಾ

200 ಪುಟಗಳು ಬೆಲೆ 2-00

ನಾಡಿಗೇರ ಕೃಷ್ಣರಾಯರ ಕಾದಂಬರಿ

ಇಬ್ಬರು ಸುಂದರಿಯರು

200 ಪುಟಗಳು ಬೆಲೆ 2-00

ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ

ಹೊಸ ಹೆಂಡತಿ

208 ಪುಟಗಳು ಬೆಲೆ 2-00

ವಿ. ಜಿ. ಕೃಷ್ಣಮೂರ್ತಿಯವರ ಕಾದಂಬರಿ

ರಾಣಾ ಸಮರಸಿಂಹ

200 ಪುಟಗಳು ಬೆಲೆ 2-00

ಅ. ನ. ಕೃ. ರವರು ಬರೆದ ಕಾದಂಬರಿ

ಸುಂದರೂ ಸಂಸಾರ

222 ಪುಟಗಳು ಬೆಲೆ 2-25

ಸೂರ್ಯನಾರಾಯಣ ಚಡಗರವರ ಕಾದಂಬರಿ

ಬಂಗಾರಲಕ್ಷ್ಮಿ

205 ಪುಟಗಳು ಬೆಲೆ 2-00

ಸೂರ್ಯನಾರಾಯಣ ಚಡಗರವರ ಕಾದಂಬರಿ

ಮನೆಗೆ ಬಂದ ಸೊಸೆ

208 ಪುಟಗಳು ಬೆಲೆ 2-00

ಗೀತಾ ಏಜನ್ಸೀಸ್-ಸೌರಾಷ್ಟ್ರಪೇಟೆ, ಬೆಂಗಳೂರು-೨.



ರಂಗು ಬಳಿಯಿರಿ!

ರಂಗು ಬಳಿಯಿರಿ!!

ಮರಕ್ಕೆ

ರಂಗು ಬಳಿಯಿರಿ!!!

ಇದು ತನ್ನದೇ ವಿಶಿಷ್ಟ ಗುಣದಿಂದ ಕೂಡಿರುವ, 50 ವರ್ಷಕ್ಕೂ ಮಿಕ್ಕಿದ ಖ್ಯಾತಿಯುಳ್ಳ, ಕಲಸಿ ತಯಾರಾಗಿಯೇ ಇರುವ ರಂಗು, ಕಾರಣ—

● ಇದು ಅತ್ಯುತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟಿರುವುದಲ್ಲದೆ ಇದರಲ್ಲಿ ಸ್ಥಿತಿಸ್ಥಾಪಕ ಮತ್ತು ಬಾಳ್ವಿಕೆಯ ಗುಣಗಳಿಂದೊಳಗೊಂಡ ವಿಶಿಷ್ಟ ವಾರ್ನಿಶ್ ಇದೆ;

೨ ಮೇಲ್ಮೈಯು ಗಟ್ಟಿಯಾಗಿಯೂ, ಥಳಥಳಿಸುವಂತೆಯೂ ಮಾಡುವುದು;

೩ ಒಳಭಾಗ ಮತ್ತು ಹೊರಭಾಗ ಇವೆರಡಕ್ಕೂ ಬಳಿಯಲು ಉಪಯುಕ್ತವಾದುದು;

೪ ಮತ್ತು 26 ವಿವಿಧ ಬಣ್ಣಗಳಲ್ಲಿ ದೊರೆಯುವುದು

ಸಂಪೂರ್ಣ ಮಾಹಿತಿಬಗ್ಗೆ ನಮ್ಮ ಡಾಟಾ ಶೀಟ್ ನಂ. ಡಿ. ಎಸ್. 1/3/60ಯ
ಸಲುವಾಗಿ ಪೋ. ಬಾ. ನಂ. 68, ಕಲ್ಕತ್ತ-1ಕ್ಕೆ ಬರೆಯಿರಿ.

SHALIMAR PAINT

ಶಾಲಿಮಾರ್ ಸೂಪರ್ ಲ್ಯಾಕ್ ಸಿಂಥೆಟಿಕ್ ಎನಾಮೆಲ್
ತಯಾರಕರು

JWTSPW 615 KN

ಕೊರವಂಜಿ

A. ANANTHIAH.

ಸಂಪುಟ ೨೦ ಮಾರ್ಚಿ ೧೯೬೨ ಸಂಚಿಕೆ ೧೨

★ ಕುಹಕಿಡಿಗಳು ★

ಚುನಾವಣೆ ಮುಗಿದು ಹೋಯ್ತೋ ಇಲ್ಲವೋ? ಇನ್ನು ಕಂಗಾಳಿಗಳ ಮತ್ತು ಭಿಕ್ಷುಕರ ಕಾಟ ಮನೆ ಬಾಗಿಲುಗಳಲ್ಲಿ ಶುರುವಾಗುತ್ತೆ !!

* * * *

" ಮಗ್ಗಿ ಕೋಷ್ಟಕ " ಪ್ರಚಾರ ಮಾಡಿದ ಉಪಾಧ್ಯಾಯರು, ಈಗ ಮದುವೆ ಮಾಡಿಕೊಂಡರಂತೆ.

—ಅಂದರೆ ಅವರು ಇನ್ನು ಮೇಲೆ ಲೆಕ್ಕಕ್ಕಿಲ್ಲ !!

* * * *

ಬೊಂಬಾಯಿನ ಚುನಾವಣಾ ಸುದ್ದಿಯನ್ನು ವಾಯ್ಸ್ ಆಫ್ ಅಮೆರಿಕ ಮೊದಲು ಪ್ರಚಾರ ಮಾಡಿತು ಎಂದನ್ನುವುದು ಸುಳ್ಳು !

* * *

ಎಷ್ಟೋ ಜನ ದಗಾಕೋರರು, ಮಾನಸಿಕ ಪರಿವರ್ತನೆ ಹೊಂದಿ ಈಗೀಗ ಅಂಗಡಿಗಳನ್ನಿಟ್ಟುಕೊಂಡು ಬಾಳುತ್ತಾ ಇದ್ದಾರಂತೆ.

—ಮಿಕ್ಕವರೂ ಅಂಗಡಿಗಳನ್ನಿಟ್ಟುಕೊಂಡಿದ್ದಾರೆ

* * * *

ಅಮೆರಿಕನ್ನರು ಕೃಷ್ಣಮೆನನ್ನರನ್ನು, ಚಹಾ ಕುಡಿದ ಹುಲಿ ಎಂದು ಬಣ್ಣಿಸಿದರು.

—ಚೀನಿ ಚಹಾ ಎಂದು ಹೇಳಲಿಲ್ಲವಲ್ಲ !

ಬಸ್ ನಿಲ್ದಾಣದಲ್ಲಿ ಭಿಕ್ಷುಕನೊಬ್ಬ ಹತ್ತು ಹತ್ತು ರೂಪಾಯಿಗಳ ಕಂತೆಯನ್ನು ಎಣಿಸುತ್ತಿದ್ದಾಗ, "ಎಲ್ಲಿ ಕದ್ದೆಯೋ ಕದೀಮಾ!" ಎಂದು ಪೋಲೀಸಿನವರು ಹಿಡಿದರಂತೆ.

—"ಇಲೆಕ್ಷನ್ ಈಗ ಗೊತ್ತಿಲ್ವಾ; ಈಗ್ಯಾಕೆ ಕದಿಬೇಕು ಅವರವರೇ ಕೊಡ್ತಾರೆ!" ಎಂದವನು ಹೇಳಿದನಂತೆ.

*   *   *   *

ಚುನಾವಣೇಲಿ ಗೆದ್ದವರು, ಸೋತ ಅಭ್ಯರ್ಥಿಗಳಿಗೆ ತಲಾ ಒಂದೊಂದು ಪರ್ಮಿಟ್ ಕೊಡಿಸುತ್ತೇವೆ ಎಂದು ಹೇಳಿದ್ದಾರೆ ಎನ್ನುವುದು ಶುದ್ಧ ಕುಹಕ!

*   *   *   *

ವೃತ್ತಪತ್ರಿಕೆಗಳನ್ನು ಓದಲು ಈಗ ಬೇಜಾರಾಗುತ್ತೆ.

—ಓದುಗರ ಪತ್ರ

—ಚುನಾವಣೆ ಮುಗಿದಮೇಲೆ, ರಾಜಾಜಿ ನೆಹ್ರೂಜಿ ಸರಸಸಲ್ಲಾಪ ನಿಂತ ಹಾಗೇನೇ! ಅಲ್ಲವೇ!

*   *   *   *

ಕಂಬಳಿ ಹುಳುಗಳಿಗೆ ಕಾಯಕಲ್ಪ ಮಾಡುವುದನ್ನು ಈಗೀಗ ವೈಜ್ಞಾನಿಕರು ಸಾಧಿಸಿದ್ದಾರಂತೆ.

—ಕಂಬಳಿ ಹುಳುಗಳನ್ನು ಸಾಕುವವರಿಗೆ ಬಲು ಮೋಜಿನ ಸುದ್ದಿ ಇದು.

*   *   *   *

ಕಂಬಳಿ ಹುಳುಗಳಿಂದ ಕಂಬಳಿಗಳನ್ನು ನೇಯುತ್ತಾರೆ ಅಂತ ಏನಾದರೂ ತಪ್ಪು ತಿಳಿಕೊಂಡಿದಿರೇನೋ—ಇಲ್ಲ; ಅದು ಸಾಧ್ಯವಾಗಿಲ್ಲ.

*   *   *   *

ಅಷ್ಟಗ್ರಹ ಕೂಟದ ಪ್ರಯುಕ್ತ ವಿಮಾನ ಸಂಚಾರ ಮಾಡಬೇಡಿ ಎಂದು ಪಂಡಿತ್ ನೆಹ್ರೂ ಅವರಿಗೆ ಸಂಪೂರ್ಣಾನಂದರು ಸಲಹೆ ಮಾಡಿದರಂತೆ.

— ಫಲ—ಸಂಪೂರ್ಣಾನಂದರಿಗೆ "ಟಿಕೆಟ್" ಸಿಗಲೇ ಇಲ್ಲ!

*   *   *   *

ಹೆಬ್ಬಿಗುಬ್ಬಾಲೇಲಿ ಭಾವಿ ತೋಡಬೇಕಾದರೆ, "ಇಲ್ಲಿ ನನ್ನ ವಜ್ರದ ಉಂಗುರ ಕಳೆದು ಹೋಯ್ತು" ಎಂದರೆ ಸಾಕಂತೆ. ಜನ ಬಂದು ಅಗೆದು ಅಗೆದು ಪಾತಾಳದ ತನಕ ಹೋಗಿ ಬಿಡುತ್ತಾರಂತೆ—

*   *   *   *

ಹಿಮಾಲಯದ ಪ್ರದೇಶದಲ್ಲಿ ಚೀಣೀಯರಿಗೆ ಏನೇನು ಬೇಕು ಎಂದೊಬ್ಬರು ಉದ್ಗಾರ ತೆಗೆದಿದ್ದಾರೆ.

—ಹೀಗೆ ಕೇಳುವ ಬದಲು ಅವರಿಗೆ ಏನು ಬೇಡ ಎಂದು ಕೇಳಿದರೆ ಉತ್ತರ ಸುಲಭವಾಗಿ ಸಿಗಬಹುದು.

ಚುನಾವಣಾ

"ಪುರಾಣದ ಪುಣ್ಯಕತೆಗಳು"

ಅಪ್ಸರೆಯರೆಲ್ಲರೂ ಸ್ವರ್ಗದಲ್ಲಿ ಸಭೆ ಸೇರಿದ್ದರು. ನಮ್ಮಲ್ಲಿ ಯಾರು ಅಧ್ಯಕ್ಷಿಣಿಯಾಗಬೇಕು? ಯಾರ್‍ಯಾರು ಸಚಿವೆ ಸಂಪುಟದಲ್ಲಿರಬೇಕು? ಇದನ್ನೆಲ್ಲಾ ಹೇಗೆ ತೀರ್ಮಾನಿಸಬೇಕು? ಎಂಬುದನ್ನೆಲ್ಲಾ ಕೂಲಂಕಷವಾಗಿ ವಿಚಾರಿಸಿ ತೀರ್ಮಾನಿಸಲು ಸಭೆ ಸೇರಿತ್ತು; ಪೌರ್ಣಿಮೆಯ ರಾತ್ರಿ, ನದಿಯ ತೀರದಲ್ಲಿ, ಮರಳ ಮೇಲೆ, ಹೊಂಗೆಮರದ ಅಡಿಯಲ್ಲಿ.

ಅಕಾರಾದಿಯಾಗಿ ಎಣಿಕೆ ಹಾಗಿ ಊರ್ವಶಿಯನ್ನು ತಾತ್ಕಾಲಿಕ ಅಧ್ಯಕ್ಷಿಣಿಯನ್ನಾಗಿ ರಂಭೆ ಸೂಚಿಸಿದಳು. ತಿಲೋತ್ತಮೆ ಅನುಮೋದಿಸಿದಳು. ಮೇನಕೆ ಘೃತಾಚಿ ಇತ್ಯಾದಿಗಳು ತೆಪ್ಪಗಿದ್ದರು.

ಅಧ್ಯಕ್ಷಿಣಿ ಸ್ಥಾನವನ್ನು ಅಲಂಕರಿಸಿ, ಊರ್ವಶಿಯು ಸೆರಗು ಹಾರಿಸಿ, ಬಳೆಗಳ ಶಬ್ದ ನುಡಿಸಿ, "ಸೋದರಿಯರೇ! ಮತ್ತು ಸವತಿಯರೇ! ನಾವೆಲ್ಲಾ ಈ ಈ ಕಲಿಕಾಲದಲ್ಲಿ ಸಂಘ ಕಟ್ಟಿಕೊಂಡು ನಮ್ಮ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳಬೇಕು. ಇಲ್ಲದೆ ನಮ್ಮ ನಮ್ಮಲ್ಲೇ ಒಡಕು ಬೆಳೆಸಿದರೆ, ಸರ್ವ ನಾಶವಾಗುತ್ತೆ, ನಮ್ಮ ಕಸುಬೇ ಅಳಿದುಹೋಗುತ್ತೆ" ಎಂದು ಪೀಠಿಕೆಯನ್ನು ಅನುಪಲ್ಲವಿ ಹಾಡಿದಂತೆ ಹೇಳಿದಳು.

"ಸೈ!" ಎಂದು ಅಪ್ಸರೆಯರೆಲ್ಲರ ಕಾಲ್ಗೆಜ್ಜೆಗಳೂ ದನಿ ಕೂಡಿಸಿದುವು.

ನಾವು ಏನೇನು ಮಾಡಬೇಕು ಎಂದು ತೀರ್ಮಾನಿಸಲು ಯಾರ್‍ಯಾರು ಅಭಿಮತ ಕೊಡಬೇಕು ಅದನ್ನು ಮೊದಲು ನಿರ್ಧರಿಸಬೇಕು, ಎಂದಳು ಮೇನಕೆ.

ಅವಳು ಮನುಷ್ಯರ ಜತೆ ಸಂಸಾರ ಮಾಡಿ, ಎಲ್ಲವನ್ನೂ ಕಲಿತುಕೊಂಡಿದ್ದಳು. "ನಾವು ನಾವೇ ಅಭಿಮತ ಕೊಡಲು ಅರ್ಹರು, ನಾವು ಅಪ್ಸರೆಯರು ಮಾತ್ರ" ಎಂದು ಘೃತಾಚಿ ಹೇಳಿದಳು. ಊರ್ವಶಿ ಅನುಮೋದಿಸಿದಳು.

"ಅದು ಹೇಗೆ ಸಾಧ್ಯ! ನಮ್ಮನ್ನೆಲ್ಲಾ ಪೋಷಿಸುತ್ತಾ, ರಕ್ಷಿಸುತ್ತಾ ಮೆಚ್ಚುತ್ತಾ, ಅನಾದಿಯಾಗಿ ಬಂದಿರುವ, ಗಂಧರ್ವರು, ಕಿನ್ನರರು ಕಿಂಪುರುಷರು, ಕಶ್ಚಿತ್ ಪುರುಷರು, ಸ್ವರ್ಗವಾಸಿಗಳು, ಸ್ವರ್ಗಪ್ರವಾಸಿಗಳು, ಇವರೆಲ್ಲರಿಗೂ ಮತ ನೀಡುವ ಹಕ್ಕು ಇರಲೇಬೇಕು" ಎಂದು ರಂಭೆ ಹೇಳಿದಳು.

"ಹ್ಞೂ; ಹ್ಞೂ," ಅಂತ ಮೇನಕೆ ಕೊರಲನ್ನು ನುಡಿಸಿದಳು. ಉಳಿದ ಅಪ್ಸರೆಯರು ರಂಭೆಯ ಸೂಚನೆಯನ್ನು ಒಪ್ಪಿಕೊಂಡರು. ಘೃತಾಚಿ, ಊರ್ವಶಿ ಇಬ್ಬರೂನೂ ಮುಸುಕು ಹಾಕಿಕೊಂಡು ಕೂತರು.

ಮಿಾಶೆ ಬಂದವರಿಗೆಲ್ಲಾ, ಎದೆ ಬಂದವರಿಗೆಲ್ಲಾ ಅಭಿಮತ ಕೊಡಬೇಕು ಎಂದು ತೀರ್ಮಾನವಾಯಿತು.

ಆಮೇಲೆ ಸಾರ್ವತ್ರಿಕ ಚುನಾವಣೆಗೆ ಎಲ್ಲಾ ಏರ್ಪಾಡಾಯಿತು.
ಚುನಾವಣೆ ನಡೆದಾಗ ಆಗಬೇಕಾದ್ದೆಲ್ಲಾ ಆಗಿಹೋಯಿತು.

ಮೊದಲದಾಗಿ

ರಂಭೆಯ ಪರವಾಗಿ ಮತ ನೀಡಲು ಹೋಗಿದ್ದ ಚಿಕ್ಕ ಅಪ್ಸರೆಯೊಬ್ಬಳು ಮತ ನೀಡದೆ ಅಳುತ್ತಾ ಹಿಂತಿರುಗಿ ಬಂದು ರಂಭೆಯ ಭೇಟಿ ಪಡೆದು,

"ತಾಯಿ! ನಿನ್ನ ಹೆಸರೇನು ಎಂದು ಕೇಳಿದರು. ಹೇಳಿದೆ. ನಿನ್ನ ಗಂಡನ ಹೆಸರೇನು ಅಂತ ಕೇಳಿದರು. ಒಂದು ನಿಮಿಷ ಯೋಚನೆ ಮಾಡಿದೆ. ಆಮೇಲೆ ದೇವೇಂದ್ರ ಎಂದು ಹೇಳಿದೆ. "ಅವನ ಹೆಂಡತಿ ಹೆಸರು ಶಚಿ; ನೀನಲ್ಲ" ಎಂದು ಮತ ನಿರ್ವಾಚಾರ್ಯರು ಹೇಳಿದರು. ಇದ್ದುದನ್ನೆಲ್ಲಾ ಇಂದ್ರನಿಗೆ ಕೊಟ್ಟಿದ್ದರೂ, ಹೆಸರು ನನಗೆ ಬರಲಿಲ್ಲ. ಮತ ನೀಡಲು ಅವಕಾಶ ಸಿಗಲಿಲ್ಲ" ಎಂದು ಹೇಳುತ್ತಾ ಆಕೆ ಅತ್ತಳು. ಸರಿಗೆ ಸೆರಗಿನಲ್ಲಿ ಒಣಗಿದ್ದ ಕಣ್ಣನ್ನು ಒರೆಸಿಕೊಂಡಳು.

ಎರಡನೆಯದಾಗಿ

ನಾರದರು ಮೇನಕೆಯ ಅಂತಃಪುರಕ್ಕೆ ತಂಬೂರಿ ತೀಡುತ್ತಾ ಬಂದರು. ತಂಬೂರಿಯ ತಂತಿಯ ಕುಣಿಯುವಿಕೆಗೆ, ತಮ್ಮ ಗಂಟಲನಾಳಗಳನ್ನು ಸರಿಕೂಡಿಸಿ "ಮೇನಾ! ಮೇನಾ! ನಿನ್ನ ಪರವಾಗಿ ಅಭಿಮತ ನೀಡಲು ಮತಕಟ್ಟೆಗೆ ಹೋದೆ. ಅಲ್ಲೇನು ಮಾಡಿದ್ರು ಗೊತ್ತೆ, ಕೈಚಾಚು ಎಂದರು. ಕೈ ಚಾಚಿದೆ. ಕಪ್ಪು ಮಸಿಯಲ್ಲಿ ಕಡ್ಡಿ ಅದ್ದಿ ಸಾದು ಇಟ್ಟ ಹಾಗೆ ತರ್ಜನಿ ಬೆರಳ ತುದಿಯಲ್ಲಿ ಇಡಲು ಹೋದರು. ಆಗ ನಾನು ಹೇಳಿದೆ, "ಅಯ್ಯಾ! ನಾನು ವೈಷ್ಣವ, ಬಟ್ಟು ಇಡೋದಾದರೆ ನಾನು ಒಲ್ಲೆ, ಅಂಗಾರ ಇಡೋದಾದರೆ ಹರಿಪ್ರೀತಿ" ಎಂದೆ ಅವ ಬಟ್ಟು ಇಡು ಎಂದು ಹುಕುಂ ಆಗಿದೆ. ಬಟ್ಟೇ ಇಡ್ತೀನಿ ಎಂದ. "ನೀನ್ಯಾಕೋ, ನಿನ್ನ ಸಂಗ್ಯಾಕೋ, ನಿನ ಗುರ್ತಿನ ಸೋಲೊಂದಿದ್ದರೆ ಸಾಕೋ ಎಂದು ಹಾಡುತ್ತಾ ಮತ ಕೊಡದೆ, ಬೆರಳನ್ನು ಪವಿತ್ರವಾಗೆ ಉಳಿಸಿಕೊಂಡು, ನೇರ ನಿನ್ನಲ್ಲಿಗೆ ಬಂದೆ." ಎಂದು ಹೇಳಿದರು. ತಂಬೂರಿಯ ತಂತಿಯನ್ನು ಶೃತಿಗೂಡಿಸಲು ಟ್ವೇ! ಠ್ಯೇ! ಮಾಡಿದರು.

ಮೇನಕೆ ಆಗ ನಿಟ್ಟುಸಿರು ಬಿಡುತ್ತಾ "ನಿಮ್ಮಂಥವರ ಮಾತ ನಂಬಿ ನಾನು ಕೆಟ್ಟೆ." ಭೂಲೋಕದಲ್ಲಿನ ಜನಗಳೇ ವಾಸಿ, ಒಡಲಿಗೆ ತೊಡಕಿಸಿದರೂ ನಂಬ ಬಹುದು ಅವರನ್ನು, ಎಂದಳು.

ಮೂರನೆಯದಾಗಿ

ದಧೀಚಿಯ ಕಸಮುಸಿರೆಯುವಳು ಘೃತಾಚಿಯ ಮನೆಗೆ ಮಟಮಟ ಮಧ್ಯಾಹ್ನ ಓಡಿಬಂದಳು.

ಅಮ್ಮಯ್ಯಾ! ಅವ್ವಕ್ಕಾ! ನಿಮಗೇ ಅಂತ ಓಟು ಮಾಡಲು, ಊಟ ಇಲ್ಲದೆ, ಓಟ ಹಾಕ್ತಾಹೋದೆ. ಅಲ್ಲಿ ಕೂತಿದ್ದ ಗರಿ ಸರಿಗೆ ರುಮಾಲಿನ ನೆರಿ ಮುದುಕಪ್ಪ ನನ್ನ ಕಂಡು "ನಿನ್ನ ಹೆಸರೇನು" ಎಂದ. "ಹಾಲವ್ವ" ಎಂದು ಹೇಳಿದೆ. "ನಿನ್ನ ಮನೆ ಎಲ್ಲಿ" ಎಂದ ನನಗ್ಯಾಕೋ ಕೋಪ ಬಂತು. "ನನ್ನ ಮನೆ ಎಲ್ಲಿದ್ದರೇನು ಅಲ್ಲಿ ನನ್ನ ಗಂಡ ಇದಾನೆ. ಗರುಡಿಮನೆ ನಾಯ್ಕ ಅವ" ಎಂದು ಹೇಳಿದೆ. ಆಮೇಲೂ ಕೂಡ ತೆಪ್ಪಗಿರಲಿಲ್ಲ ಅವ. "ಕೈ ಕೊಡು ಎಂದ, ಬೆರಳು ನೀಡು ಅಂದ. ಮಸಿ ಮಡಗ್ತೀನಿ ಅಂದ." "ನಿನ್ನ ಮಸಿ ನಿನ್ನ ಮುಖಕ್ಕೇ ಮಡಕ್ಕೋ "ಅವ್ವಾವರಿಗೆ ಓಟು ಮಾಡುಕ್ಕೆ ಅಂತ ಬಂದರೆ, ನನಗೇ ಮಸಿಬೊಟ್ಟು ಮಡಗ ಬೇಕು ಅಂತೀಯಾ, ನಿನ್ನ ಓಟು ನೀನೇ ಮಡಕ್ಕೋ!" ಅಂತ ಅವನ್ನ ಬೈದು ಬಂದುಬಿಟ್ಟೆ.

"ನೀವು ನನ್ನ ಬೈಬೇಡಿ ಅವ್ವಾ!" ಎಂದಳು ಆಕೆ. ಪಾತ್ರೆ ತೊಳೆಯುವಾಗ ಶಬ್ದ ಆಗುತ್ತೆ ನೋಡಿ ಹಾಗೆ ಶಬ್ದ ಮಾಡ್ತಿತ್ತು, ಅವಳ ಹಲ್ಲುಗಳು ಕಟ ಕಟ ಅಂದಾಗ.

ನಾಲ್ಕನೆಯದಾಗಿ

ಕಾಮಧೇನುವಿನ ಸಗಣಿ ಎತ್ತಿ ಬೆರಣಿಮಾಡಿ ಮಾರೋ ಕಾಮಾಚಿ ರಂಭೆಯ ಹತ್ತಿರಕ್ಕೆ ಬಂದು "ತಾಯೋರಾ! ನಿಮಗೇ ಅಂತ ಓಟು ಕೊಡುಕ್ಕೆ ಹೋದೆ. ಅಲ್ಲಿದ್ದ ಚೆಂದುಳ್ಳಿ ಹುಡುಗ 'ಓಟಿನ ಬೆಲೆ' ಗೊತ್ತಾ" ಎಂದು ಕೇಳಿದ.

'ಹ್ಞೂ ಕಣ್ಣಾ! ಓಟಿಗೊಂದು ಮುತ್ತು ಹೇಳವ್ರೆ' ಅಂದೆ. ಅವ ಕೆಂಪಾಗಿ, ಬೆವರುತ್ತ. "ನಿಂಗ್ಯಾರೋ ಸುಳ್ಳು ಹೇಳವ್ರೆ" ಅಂದ. ಹಂಗೇ ಬಂದ್ಬಿಟ್ಟೆ ಎಂದಳು.

—ಬಚ್ಚ

ತರಕಾರಿ ಮಾರುಕಟ್ಟೆಯಲ್ಲಿ ಮತ ಕೇಳಲು ಹೋದಾಗ, ಅಭ್ಯರ್ಥಿಗೂ ಮಾರುವಾಕೆಗೂ ನಡೆದ ವಾಗ್ವಾದ ಬಲು ಇಂಪಾಗಿತ್ತು ಎಂದು ಗೂಂಡಾ ಭೀಮಣ್ಣ ಬರೆದಿದ್ದಾನೆ.

—ಭೀಮಣ್ಣನೇ ಸೋತಿರಬೇಕು!

ನೋಡೀ—ಅಂದ್ರೆ

——:o:——

"ನೋಡಿ ಅಂದ್ರೆ ದೇವರ ಮಾಯೆ, ಪ್ರಪಂಚದಲ್ಲಿ ಯಾವುದು ಶಾಶ್ವತ ಅಂತೀನಿ" ಎಂದು ಹಾಲಿನವಳು ಬರೋಕೆ ಮುಂಚಿತವಾಗಿಯೇ ಮನೆಯಾಕೆ ಇವತ್ತು ಕೊಂಕು ಮಾತಿನಿಂದಲೇ ಸುಪ್ರಭಾತ ಹಾಡಿದಳು. ತಿಂಗಳ ಮೊದಲನೆ ದಿನದ ಯಾವ ಸಂಜೆಯೂ ಈಕೆ ಇಂಥ ಮಾಯಾಜಾಲವನ್ನು ಬೀಸಿ ಇಷ್ಟಾರ್ಥ ಸಾಧಿಸಿಕೊಂಡಿದ್ದಿಲ್ಲ. ಈದಿವ್ಸ ಯಾಕೆ ಬೆಳಿಗ್ಗೆ ಎದ್ದ ತಕ್ಷಣ ಪ್ರಪಂಚವೆಲ್ಲ ನಶ್ವರ ವೆನ್ನೋ ಅರ್ಥ ಬರುವಂಥ ಮಾತಾಡಿ ವಯ್ಯಾರವನ್ನೆಲ್ಲಾ ಬಿಟ್ಟು ವೈರಾಗ್ಯದ ಸೆರಗು ಹಾರಿಸುತ್ತಾಳಲ್ಲ ಆರುಮಕ್ಕಳಾದ ಮೇಲೆ ಎಂದುಕೊಂಡೆ!

"ಯಾಕೆ? ಏನಾಯ್ತು? ರಾತ್ರಿ ಕೆಟ್ಟ ಕನಸು ಬಿತ್ತೇನೆ. ಮಾವನವರು ಶೇವಣಿ ಕಳಕೊಂಡಂತೆ ಕನಸಾಯ್ತೇನೆ? ತಾಯಿತಿ ಕಟ್ಟಿಸಲೇನೆ? ಅಂತ ಬಿಸಿ ಬಿಸಿಯಾಗಿ ಸಂತೈಸುತ್ತಲೇ ಇದ್ದೆ. ಆಕೆ ಹೇಳಿದ ಮಾತನ್ನೇ ತಿರಿಗಿಸಿದ್ದೆ-ಯಾವುದೂ ಶಾಶ್ವತವಲ್ಲ ವಯಸ್ಸಾಗುತ್ತಾ ಬರುತ್ತೆ ಅಂತ!

ನೋಡಿ, ನಮ್ಮನೇಲಿ ಮನೆಯಾಕೆ ಒಮ್ಮೊಮ್ಮೆ ಸುಮ್ಮನಾಗುತ್ತಾಳೆ, ಆಗ ಹಿರಿಮಗಳು ಅದೇ ವಿಷಯವನ್ನೇ ಮುಂದುವರಿಸುತ್ತಾಳೆ! ನೀವು ಸರಳ ಭೂಗೋಳ ದಲ್ಲಿ 'ಕೊಲ್ಲಿ' ಎಂಬುದನ್ನು ಓದಿದ್ದೀರಲ್ಲ-ಹಾಗೇನೇಹಿರಿಮಗಳ ನಾಲಿಗೆ ಕೊಂಚ ಚಾಚಿಕೊಂಡೇ ಇರುತ್ತೆ. ಯಾರನ್ನಾದರೂ ಈಕೆ ಕೊಲ್ಲಬಹುದೆನಿಸುತ್ತೆ. ಅವಳು ಕೂಗುತ್ತಲೇ ಒಳಕ್ಕೆ ಬಂದಳು.

"ಅಯ್ಯೋ ಪಾಪ, ಹೇಗಿದ್ದವರು ಹೇಗಾಗಿಬಿಟ್ಟರು ಅಣ್ಣ" ಅಂತ!

"ಮನೆಗಳ ಆಭಾವ ಗ್ರಹಗಳಿಗೂ ತಪ್ಪಿದ್ದಲ್ಲಮ್ಮ, ಒಂದೊಂದು ಮನೇಲಿ ಒಂದೊಂದೇ ಗ್ರಹ ಇದ್ದಾಗಲೇ ಸೂರು, ತೊಲೆ ಬಿಡ್ತಿರಲಿಲ್ಲ. ಈಗ ಎಂಟೂ ಗ್ರಹಗಳೂ ಒಂದೇ ಮನೇಲಿ ಸೇರಿಕೊಂಡು ಮಳೆ ಹೊಡ್ಯೋಕೆ ಪ್ರಾರಂಭಿಸಿದರೆ ಗೋಡೆಗಳು ಬೀಳೋದು ಖಂಡಿತ ಅಮ್ಮ, ಪಕ್ಕದ ಮನೆ ಮಾಲೀಕ ತಿರುಪತೀಗೆ ಹೋಗ್ತಾ ಇರೋದನ್ನು ನೋಡಿ ಆ ಮಾತು ಹೇಳ್ತಾ ಇದೀಯಾಮ್ಮಾ" ಅಂತ ಶಾಂತಿ ಮಾಡಿಕೊಳ್ಳಬೇಕಾದ ಜಾತಕವಿರುವವನಿಗೆ ಜ್ಯೋತಿಷ್ಯ ಹೇಳುವ ರೀತಿಯಲ್ಲಿ ಅರ್ದಂಬರ್ದ ಗಂಟು ಹಾಕಿದೆ!

ಪಕ್ಕದ ಮನೆ ಮಾಲೀಕ ತಿರುಪತೀಗೆ ಹೋಗಿ ಒಂದು ತಿಂಗಳಾಯ್ತಣ್ಣ, ಅವರಲ್ಲ, ಏನಾದರೂ ಚಿಲ್ಲರೆ ಇದ್ಯೇನಣ್ಣ....ಸಹಾಯ ಮಾಡಬೇಕೆನಿಸುತ್ತೆ" ಎಂದು ಒಳ್ಳೇ ಮಾತಿನಲ್ಲೇ ಕೇಳಿದಳು. ಹೆಣ್ಣುಮನಸ್ಸು, ಯಾವುದಕ್ಕೆ ಕರಗಿತೋ ನನಗೆ ತಿಳೀದು-ಆದರೂ ಹೆಣ್ಣುಹೃದಯ ಕರಗಿದಷ್ಟೂ ನನ್ನ ಹಣಕ್ಕೆ ಅಪಾಯ ಎಂಬ ವಿಚಾರ ನನಗೆ ಗೊತ್ತಿತ್ತು. "ಉಷಃಕಾಲದಲ್ಲಿ ಏಕಮ್ಮ ನಿನಗೆ ಈ ಚಿಲ್ಲರೆ ಮಾತು, ಬೀದಿ ಬಾಗಿಲಿಗೆ ರಂಗೋಲಿ ಇಡಮ್ಮ" ಎಂದೆ ಯಾಕೆಂದರೆ ಅಷ್ಟಗ್ರಹಗಳ ಕಾಟ ದಿಂದ ತಪ್ಪಿಸಿಕೊಳ್ಳಲು ಶಾಂತಿ ಮಾಡುಕೊಳ್ಳೋಕೆ ನನ್ನಲ್ಲಿ ಹಣವಿಲ್ಲ. ನಮ್ಮಗಳು ಬೀದಿ ಬಾಗಲಿಗೆ ರಂಗೋಲಿ ಇಟ್ಟರೆ ಸಾಕು ಅಷ್ಟಬಂಧನ ಮಾಡಿದ ಹಾಗಿರುತ್ತೆ. ಮಾಟ ಮಾಡಿಸಿದವರ ಮನೆ ಇದ್ದ ಹಾಗೆ ಇರುತ್ತೆ! ವೋಟು ಕೇಳೋಕೆ ಬರೋ ಕ್ಯಾಂಡಿಡೇಟುಗಳೇ ನಮ್ಮನೆ ಹೊಸಲು ತುಳ್ಯೋಕೆ ಹಿಂಜರಿಯುತ್ತಾರೆಂದ ಮೇಲೆ, ಈ ಬಾಕಿ ಚಿಲ್ಲರೆ ಪ್ಲಾನೆಟ್‌ಗಳು ನಮ್ಮ ಬೀದಿಗೇ ಸುಳಿಯುಲ್ಲ ಅಂತ ನನ್ನ ನಂಬಿಕೆ. "ಬೀದಿ ಬಾಗಿಲಿಗೆ ರಂಗೋಲಿ ಇಡ್ತಾ ಇರೋವಾಗ್಩ೇನೆ ಅಣ್ಣ ನಾನು ನೋಡಿದ್ದು. ಅವರನ್ನು ನೋಡಿದರೆ ಅಳುವೇ ಬರುತ್ತೆ ಅಣ್ಣ" ಎಂದು ಅವಳು ಕಣ್ಣನ್ನೇ ಒತ್ತಿ ಕೊಂಡಳು. ಬತ್ತಿ ಹೋಗಿರೋ ಕಣ್ಣುಗಳನ್ನು ನಾನೇಕೆ ಒತ್ತಿಕೊಳ್ಳಲಿ. ನಾನು ಒತ್ತಿಕೊಂಡಿದ್ದು ಸುಮಾರು ದಿವಸಗಳಿಂದ ಬತ್ತಿ ಹೋಗಿರುವ ಗಂಟಲನ್ನು!

"ಕೋಟಿ ಶ್ರೀನಿವಾಸಶೆಟ್ಟಿ, ಅವನ ಹೆಂಡತಿ, ಮಕ್ಕಳು ಬೀದೀಲಿ ತಿರುಪೆ ಎತ್ತುತ್ತಾ ಇದಾರೆ ಅಣ್ಣ" ಎಂದಳು.

"ಯಾಕೆ, ಇಂಥ ಕೆಟ್ಟ ಸುಳ್ಳು ಹೇಳ್ತೀಯ, ಯಾವ ಚುನಾವಣೆಗೆ ನಿಲ್ಲ ಬೇಕಾಗಿದೆಯೆ ನೀನು? ಯಾವ ಕೋರ್ಟಿನಲ್ಲಿ ಸಾಕ್ಷಿ ನುಡಿಯಬೇಕಾಗಿದೆಯೆ ನೀನು?" ಎಂದೆ.

"ನಾನ್ಯೇಕೆ ಸುಳ್ಳು ಹೇಳಲಿ ಅಣ್ಣ, ಕೋಟಿ ಸುಳ್ಳು ಹೇಳಬೇಕಾಗಿರುವವನು ನೀನು" ಎಂದಳು.

"ಎಲಾ, ಇವಳ....ಲೋಕವೇ ಎಂಟೂ ಗ್ರಹಗಳ ಕೂಟಕ್ಕೆ ಹೆದರಿ ತಲ್ಲಣಿಸು ತ್ತಿರುವಾಗ, ದಶಮಗ್ರಹದ ನೆನಪು ಮಾಡಿಕೊಡ್ತಾ ಇದಾಳಲ್ಲ ನನಗೆ" ಎಂದು ಕೊಂಡು ಹಾಸಿಗೆ ಮೇಲಿಂದ ಎದ್ದು ಬೀದಿ ಬಾಗಿಲಿಗೆ ಬಂದೆ. ಎಂಥಾ ಕರುಣಾ ಜನಕ ದೃಶ್ಯ ಅಂತೀರಿ-ಲಕ್ಷಾಧಿಪತಿ ಕೋಟಿ ಶ್ರೀನಿವಾಸಶೆಟ್ಟಿ ನಿತ್ರಾಣನಾಗಿ ಹೆಜ್ಜೆ ಹಾಕ್ತಾ ಇದಾನೆ. ಕೈಮಗ್ಗದ ಶಾಲು ಹೊದ್ದುಕೊಂಡು ಪತ್ನಿ ಪತಿಯನ್ನೇ ಹಿಂಬಾಲಿಸುತ್ತಿದ್ದಾಳೆ. ಆ ಕಡೆ ಇಬ್ಬರು ಮಕ್ಕಳು, ಈ ಕಡೆ ಇಬ್ಬರು ಮಕ್ಕಳು ತಲೆ ಕೆದರಿಕೊಂಡು ನಡುಗ್ತಾ ಹೋಗುತ್ತಿವೆ. ಶ್ರೀನಿವಾಸಶೆಟ್ಟಿ ಕೈಲಿ ಒಂದು ಸಣ್ಣ ಪೆಟ್ಟಿಗೆ, ಗೋಲುಕ ಇರಬೇಕು. ಅರಿಶಿನ ಬಣ್ಣ ಹಾಕಿತ್ತು! ಇಡೀ ಕುಟುಂಬವೇ

ಬೀದಿ ಪಾಲಾಗಿ ಭಿಕಾರಿಗಳ ಹಾಗೆ ಹೋಗ್ತಾ ಇರೋದನ್ನು ನೋಡಿದಾಗ ನನಗೇ ಕರಳು ಹಿಂಡಿದ ಹಾಗಾಯ್ತು. ನಿನ್ನೆ ಸಂಜೆಯುವರಿಗೆ ಲಕ್ಷಾಧಿಪತಿಯಾಗಿದ್ದವನಿಗೆ ಏನು ಗತಿ ಬಂತಪ್ಪ! ಜವಳಿ ಅಂಗಡಿ, ಜವಾಹಿರಿ ಅಂಗಡಿ ಎಲ್ಲಾ ಪಾಪರೆ, ಮೈತುಂಬಾ ಸಾಲವೆ? ಅಯ್ಯೋ ಎಂದೇ ಚೀರಿದೆ. ಯಾವುದೂ ಶಾಶ್ವತವಲ್ಲ ಎಂದು ಕೂಗಿಕೊಂಡೆ. ಶ್ರೀನಿವಾಸಶೆಟ್ಟಿ, ಹೆಂಡತಿ, ಮಕ್ಕಳು ಎಲ್ಲರೂ ಒಕ್ಕೊರಲಿನಲ್ಲಿ ಬಿಕ್ಕಳಿಸುತ್ತಾ ಹಾಡು ಪ್ರಾರಂಭಿಸಿದ್ದರು-"ಬಾಬು!....ಬಾಬು!....ಏಕ್ ಪೈಸಾ ದೇವ್....ಬಾಬು ...ಬಾಬು ...ಏಕು ಪೈಸಾ ದೇವ್" ಅಂತ! ಎಷ್ಟೆ ಆಗಲಿ ಸಾಲಾಗಿ ಹೆಣ್ಣು ಹೆತ್ತವ ನಾನು, ಯಾರಿಗಾದರೂ ಕಷ್ಟ ಕಾಲದಲ್ಲಿ ಸಹಾಯ ಮಾಡೋಣವೆ ಎನ್ನಿಸುತ್ತೆ! ಅದರಂತೆ ನಾನೂ ಮನೆ ಬಾಗಿಲು ಬಿಟ್ಟು ಶೆಟ್ಟರ ಕುಟುಂಬದ ಮುಂದಕ್ಕೇ ಹೋಗಿ ನಿಂತುಕೊಂಡೆ, "ಏಮಂಡಿ, ವಾಕಿಂಗ್ ಪೋಯೇಟಪ್ಪುಡೂನೂ ಆಯನ ವೆಂಟಪಡ್ತಾಡು" ಅಂತ ಶೆಟ್ಟರ ಕುಟುಂಬ ಉಸಿರಿದ್ದು ಕೇಳಿಸಿತು. ಶೆಟ್ಟರು "ವಸ್ತಾನು....ಸ್ವಾಮಿ" ಅಂತ ಜೋರಾಗಿ ಕೈ ಮೇಲಕ್ಕೆತ್ತಿದಾಗ ನಾನು ಕಂಡಿದ್ದು ಗೋಲಕದ ಡಬ್ಬಿಯಲ್ಲಿ-ಟ್ರಾನ್ಸಿಸ್ಟರ್ ರೇಡಿಯೋ!

—ಹಾ. ರಾ.



ಅಲ್ಲಾ, ಸ್ವಾಮಿ ನಮಗೆ ಗೋವ ಬಂದಿದ್ದು, ನಮ್ಮ ಹುಡುಗ್ರು ಕ್ರಿಕೇಟ್‌ನಲ್ಲಿ ಹೊಡಿದಿದ್ದು ಇವೆಲ್ಲ ನೋಡಿದ್ರೆ ಇಂಗ್ಲೇಂಡ್‌ನೋರು ಸಾಲ ಕೊಡೋದು ನಿಲ್ಲಿಸಿಬಿಡ್ತಾರೆ ಅಂತ ಕಾಣುತ್ತೆ

ಮೊದಲ ಚುಂಬನದೊಳಗೆ

ಹಲು ಹೋದಂತೆ

ಆಯಿತು. ನಾವು ವೆಸ್ಟಿಂಡೀಸ್ ಫಸ್ಟ್ ಟೆಸ್ಟಿನಲ್ಲಿ ಸೋತಿದ್ದುದು ನನಗೆ ಸರಿಬರಲಿಲ್ಲ. ನನ್ನ ದಿನ ಭವಿಷ್ಯದಲ್ಲಿ 'ಉತ್ಸಾಹವಾರ್ತೆ' ಎಂದು ಬರೆದಿದ್ದುದು ನನಗೆ ಸರಿಬರಲಿಲ್ಲ. ಹಿಂದಿನ ದಿನ 'ಶುಭ ಪತ್ರ' ಎಂದು ಬರೆದಿತ್ತು. ಬಂದುದು ಪುಡಿ ಚಿಲ್ರೆಯ ಕಾಗದ. Your article this month is not very fine ಎಂದು ಅವನು ಬರೆದಿದ್ದ! ಎಂದರೆ your article is fine ಎಂಬರ್ಥದಲ್ಲಿ ಅದು ಶುಭ ಪತ್ರವೇ ನನ್ನ ಲೇಖನಗಳೆಲ್ಲಾ very fine ಆಗಿರುವುವೆಂದು ಅವನಿಗೆ ಯಾರು ಹೇಳಿದರೋ ಏನೋ. ಅವನ ಅಭಿಮಾನ ಮೆಚ್ಚುಗೆಯ ಅಂಶವಾದರೂ ಅದರ ಹೊರೆ ಅನಪೇಕ್ಷಿತ. ಇದನ್ನೇನನ್ನೂ ಅರಿಯದೆ 'ಶುಭ ಪತ್ರ' ಎಂದು ಬರೆದಿದ್ದ ದಿನ ಭವಿಷ್ಯಕಾರನ ಮೇಲೆ ನನಗೆ ಅನುಮಾನ. ಇಪ್ಪತ್ತನೇ ತಾರೀಖು ಆದಮೇಲೆ ಇನ್ನೆಂತಹ ಉತ್ಸಾಹವಾರ್ತೆ?

ನನ್ನ ಅನುಮಾನ ಬುಡವಿಲ್ಲದ್ದು. ಆ ಭವಿಷ್ಯಕಾರ, P.G.W. ಹೇಳಿದ ಹಾಗೆ 'a bit of all right' **ಮೊದಲ ಟೆಸ್ಟಲ್ಲಿ ಭಾರತೀಯರು ಹತ್ತು ವಿಕೆಟ್ಟುಗಳಿಂದ ಸೋತರು!** ಎಂದಮೇಲೆ

God is in his heaven and all is right with the world.

ಅಷ್ಟಗ್ರಹ ಕೂಟದ ಪ್ರಭಾವದಿಂದಲೇ ಭಾರತ ಇಂಗ್ಲೆಂಡಿನ ಮೇಲೆ ರಬ್ಬರ್ ಪ್ರಶಸ್ತಿ ಪಡೆಯಿತಲ್ಲಾ, ಭಾರತದ ಆ ವಿಜಯಕ್ಕೆ ಕಾರಣವೇನು-ಎಂದು ಚಿಂತಿಸಲೇ ಬೇಕಲ್ಲವೇ. ಗ್ರಹಗಳ ಪ್ರಭಾವವನ್ನು ನಂಬುವುದು ಮೌಢ್ಯದ ಸಂಕೇತವೆಂದು ನೆಹರೂ ಹೇಳಿದಾರೆ. ಅವರು (ಅಂಥಾವ್ಯಕ್ತಿ!) ಹಾಗೆ ಹೇಳಿರಬೇಕಾದರೆ ನಾವು ಗ್ರಹಗಳ ಪ್ರಭಾವನಂಬಿ ಮೂಢರಾಗಬಾರದು ಚೌ ಎನ್ ಲೈ, ಪಂಚಶೀಲ, ನಾಸೆರ್, ಕೃಶ್ಚಾಫ್ ಮೊದಲಾದವರನ್ನು ನಂಬಿ ಮೆನನ್ನರಿಗೆ ಶರಣಾಗಿ ಆಧುನಿಕರಾಗಬೇಕು. ಮತ್ತು ಭಾರತದ ವಿಜಯಕ್ಕೆ ನಿಜವಾದ ಕಾರಣಗಳನ್ನು ಹುಡುಕಬೇಕು.

ನಮ್ಮ ವಿಜಯಕ್ಕೆ ಮೊದಲು ಕಾರಣರಾದವರು ನಿಮಗೆಲ್ಲ ತಿಳಿದಂತೆ ಟ್ರೂಮನ್, ಸ್ಟಾಥಾಂ, ಶಾಡ್ರೆ, ಮೇ ಮತ್ತು ಸುಬ್ಬರಾವ್. ಅವರು 'ಇಂಡಿಯಾದವ

ರೇನು ಮಹಾ!' ಎಂದು ಬಿಟ್ಟರು. ಆದುದರಿಂದ ಹಾಳೂರಿನಲ್ಲೇ ನಮ್ಮವರು ಉಳಿದರು!

ಅಥವಾ ಫುಲ್ಲರ್‌ಗೆ ಬಂದ ಡಿಸೆಂಟ್ರಿ, ಬ್ಯಾರಿಂಗ್ಟನ್ನಿಗೆ ಆದ "ದೇಹದಲ್ಲಿ ಏತ್ವಾಸ"ಗಳೂ ಕಾರಣವಾಗಿರಬಹುದು.

ನಮ್ಮವರಾದರೋ ಬೇರೆ ಕಾರಣಗಳನ್ನು ಕೊಡುತ್ತಾರೆ.

1. ಐವತ್ತು ಟೆಸ್ಟುಗಳಲ್ಲಿ ಆಡಿ ಮೂರು ಸಾವಿರ ರನ್ನುಗಳನ್ನು ಹೊಡೆದ) ಉಮ್ರಿಗರ್ (ಐವತ್ತು ಟೆಸ್ಟುಗಳಲ್ಲಿ ಛಾನ್ಸ್ ಕೊಟ್ಟರೆ ನಾನೂ ಕೊನೇ ಪಕ್ಷ ಎರಡು ಸಾವಿರ ರನ್ ಹೊಡೆಯುತ್ತೇನೆ!) ಮತ್ತು (ನಾಲ್ಕು ಟೆಸ್ಟುಗಳಲ್ಲಿ ಯಾವುದೋ ಒಂದರಲ್ಲಿ ಐವತ್ತು ರನ್ ಹೊಡೆದು 'Indispensible' ಆದ) ಅಮರ ಆಟ ಗಾರ ಬೋರ್ಡೆ (ಸಂದರ್ಭಬಂದರೆ ಈತ ಒಂದು ವರ್ಷಕ್ಕೆ 'ಅಕಸ್ಮಾತ್ತ್' ಏಳೆಂಟು ವಿಕೆಟ್ಟುಗಳನ್ನು ಉರುಳಿಸಬಲ್ಲ) ಮತ್ತೂ ಮಂಜ್ರೇಕರ್ (Never heard of wes Hall' ಏಕೆಂದರೆ ಹಾಲ್ ಬೌಲ್ ಮಾಡುವಾಗ ಎಂದಾದರೂ ಈತ ಸ್ಕೋರ್ ಮಾಡಿದ್ದರೆ ತಾನೇ!) ದುರಾನಿ (good chap : ಹಳೇಹುಲಿ ಮಂಕಡನ ಶಿಷ್ಯ) ಇವರ ಆಟದ ಮಟ್ಟ ಏಕ್ ದಂ ಗಗನಕ್ಕೇರಿದ್ದರಿಂದ ನಮ್ಮವರು ಗೆದ್ದರು.

2. ಟೀಂಸ್ಪಿರಿಟ್ ಚೆನ್ನಾಗಿತ್ತು (yes man ಗಳ ಸಂಖ್ಯೆ ಹೆಚ್ಚಿತೆಂದು ಅರ್ಥವೋ ಏನೋಗೊತ್ತಿಲ್ಲ.)

3. Spirited captaincy (ಗೆದ್ದಾಗ ಇದು ಯಾರಿಗೆ ಇರುವುದಿಲ್ಲ.)

ಇದೆಲ್ಲಾ ನಿಜವಾಗಿದ್ದರೆ ನನ್ನಷ್ಟು ಸಂತೋಷಿಸುವವರು ಯಾರೂ ಇಲ್ಲ. ಆದರೆ ಅದೆಲ್ಲಾ ನಿಜವೇ? ರಾಷ್ಟ್ರೀಯ ಉತ್ಪನ್ನದ ಸುದ್ದಿಯೂ ನಮ್ಮ ಕ್ರಿಕೆಟ್ ಕ್ರೀಡಾಮಟ್ಟದ ಸುದ್ದಿಯೂ ಒಂದೇ.

ರಾಷ್ಟ್ರೀಯ ಖರ್ಚಿನ ಪಟ್ಟಿ, ಅವಶ್ಯಕತೆಗಳ ಮಟ್ಟದ ಸುದ್ದಿಗೇ ಹೋಗದೇ, ಆಫೀಸಿನಲ್ಲಿ ಲಭ್ಯವಾದ ಅಂಕೆ ಅಂಶಗಳ ಆಧಾರದಿಂದ ಉತ್ಪನ್ನ ಮಟ್ಟದ ಹೆಚ್ಚಳ ವನ್ನು ತೋರಿಸಿದರೆ ನಮಗೆ ಸಿಕ್ಕಿದ್ದೇನು? ಪತ್ರಿಕಾವರದಿಗಳಲ್ಲಿ, ನಮ್ಮವರು 'ಶೂರ' ರಾದರೆ ಅವರ ಶೂರತನ ನಿಜವೆಂದಾಯಿತೇ?

ಮತ್ತು ನಮ್ಮ ಕ್ರಿಕೆಟ್ ಕ್ರೀಡಾಪಟುಗಳನ್ನು ಕರ್ಣನಿಗೆ ಹೋಲಿಸಬಹುದು. ಅವನ ಔದಾರ್ಯ ಇವರಲ್ಲಿದೆ. ತಮ್ಮ ವಿಕೆಟ್ಟುಗಳನ್ನು ಬಹು ಸುಲಭವಾಗಿ ಕೊಡು ತ್ತಾರೆ. ಅವನ ಒಡೆಯನಿಗೆ ಅವನಲ್ಲಿ ಎಷ್ಟು ವಿಶ್ವಾಸವಿತ್ತೋ ನಮ್ಮ ಸೆಲೆಕ್ಟರು ಗಳಿಗೂ ಇವರಲ್ಲಿ ಅಷ್ಟು ವಿಶ್ವಾಸವಿದೆ. ಕರ್ಣನಂತೆ ಇವರು ಎಂದೂ ಯಾವ

ಮಹತ್ಕಾರ್ಯವನ್ನೂ ಸಾಧಿಸಲಿಲ್ಲ. ಕರ್ಣನಂತೆ ಹೊಗಳಿಕೆಗೆ ಇವರೂ ಉಬ್ಬುತ್ತಾರೆ. ಕರ್ಣನಂತೆ ಇವರೂ ಶತ ಮೊಂಡರು. ಇವರ ವಿದ್ಯೆಯೂ ಸಮಯಕ್ಕೊದಗುವುದಿಲ್ಲ! ಕಂಡೂ ಕಂಡೂ, ನಾವು ಕೌರವನಂತೆ ಇವರನ್ನೇ ನಂಬಬೇಕಾಗಿದೆ. ಇವರೋ ಮೊಲ ಎದ್ದಾಗ ನಾಯಿ ಮಾಡಿದ ಕೆಲಸದಂತಹದನ್ನೇ ಮಾಡುವುದು. ಹತ್ತು ವರ್ಷದ ಒಪ್ಪಂದವೊಂದನ್ನು ಮಾಡಿಕೊಂಡು ನಂತರ ಇವರ ಪ್ರಶಂಶೆ ನಿಂದನೆಗಳನ್ನು ಮಾಡಬೇಕು. ಆಗ ಬೆಲೆ ಸರಿಯಾಗಿ ಗೊತ್ತಾದೀತು.

ಎಲ್ಲಿಂದ ಹೊರಟು ಎಲ್ಲಿಗೋ ಬಂತು! ಇರಲಿ, ನಾನು ಲೋಕ ಶಿಕ್ಷಕನೇನೂ ಅಲ್ಲವಲ್ಲ! ನಾನು ಮೊದಲು ಹೇಳಿದಂತೆ ದಿನ ಭವಿಷ್ಯಕಾರ ಸುಳ್ಳನಲ್ಲವೆಂದಾಯಿತು. ಭಾರತ ಸ್ವತಂತ್ರವಾದ ಮೇಲೆ, ಗೋವಾ ವಿಮೋಚನೆಯ ಸುದ್ದಿಯೊಂದನ್ನು ಬಿಟ್ಟರೆ ಇಂತಹ ರೋಮಾಂಚಕಾರೀ ಸುದ್ದಿ ಇನ್ನೊಂದನ್ನು ನಾನು ಕೇಳಿರಲಿಲ್ಲ. ಎಂ.ಸಿ.ಸಿ. ಪ್ರವಾಸದ ಕಾಲದಲ್ಲಿ ತೂಕಡಿಸುತ್ತಾ ಕುಳಿತ ನಾನು ಈಗ ಕಾಮೆಂಟರಿ ಕೇಳಲು ರೇಡಿಯೋ ಇರುವವರಿಗೆಲ್ಲಾ ಸಲಾಂ ಹೊಡೆಯುತ್ತಿದ್ದೇನೆ. ನನಗೆ ಉತ್ಸಾಹ ಮರುಕಳಿಸಿದೆ.

'ಉಮ್ರಿಗರ್ ಸೆಂಚುರಿ ಹೊಡೆದ' ಎಂದು ನಮ್ಮ ಹೊಸ ಹೈಸ್ಕೂಲು, ಕಾಲೇಜು ಹುಡುಗರು ಹೇಳಿದಾಗ 'ಓಹೋ ಅವನು ಫಾರಂನಲ್ಲಿಲ್ಲ' ಎಂದಿದ್ದೆ. ಸದ್ಯ, ಟ್ರಿನಿಡಾಡ್ ಪಂದ್ಯದಲ್ಲಿ ಅವನು ಫಾರಂಗೆ ಬಂದ. ಫಸ್ಟ್ ಇನಿಂಗ್ಸ್‌ನಲ್ಲಿ 'He scored a faultless two' ಮತ್ತು ಸೆಕೆಂಡ್ ಇನಿಂಗ್ಸಿನಲ್ಲಿ 'an immortal twentyeight' ಮತ್ತು ಇಂಡಿಯಾದ latest opener ಮೆಹ್ರಾ (a sensational new find) secored an immaculate faultless debonair 'Duck'—ಎರಡೂ ಇನ್ನಿಂಗುಗಳಲ್ಲಿ. ಹಾಗಿದ್ದರೂ ಇಂಡಿಯನ್ನರು ಮೊದಲ ಇನ್ನಿಂಗ್ಸಿನಲ್ಲಿ (collossal) ಭಾರೀ ಸ್ಕೋರು ಮಾಡಿ, ತಮ್ಮ mystic ಮತ್ತು Profound ಸ್ಪಿನ್ನಿನ ದೆಸೆಯಿಂದ ವೆಸ್ಟಿಂಡೀಸಿಗೆ ಕೇವಲ ಎಂಭತ್ತಾರು ರನ್‌ಲೀಡ್ ಕೊಟ್ಟರು. ವಿಶ್ವವಿಜೇತರಾದ ಇಂಗ್ಲೆಂಡಿನವರನ್ನೇ ಗೆದ್ದ ಭಾರತೀಯರಿಗೆ ಯಾವುದು ತಾನೇ ಅಸಾಧ್ಯ? ತೊಂಬತ್ತೆಂಟೇ ರನ್ನಿಗೆ ಔಟಾದರು. ನಮ್ಮ ನೆತ್ತಿ ತಂಪಾಯಿತು ಭಾರತದ ಕೀರ್ತಿ ದಿಗಂತಗಳಿಗೆ ಹರಡಿತು. ದೇವತೆಗಳೂ ಆಶ್ಚರ್ಯಪಟ್ಟರು! ನಾನೂ ಸಹಾ! ಇನ್ನೂ ಪಡುತ್ತಲೇ ಇದೇನೆ. 'ವಿಸ್ಮಯೋ ಮೇ ಕೊಟರ್ಬಸ್ಯಾ ಹೃಷ್ಯಾಮಿಚ ಮುಹು ಮುರ್ಹುಃ' ಇನ್ನೂ ಮುಂದೆ ಏನೇನಾಗುವುದೋ ಎಂಬುದನ್ನು ಹಾಗೇ ಲೆಕ್ಕ ಹಾಕಿಕೊಳ್ಳುತ್ತಿದ್ದೇನೆ.

ನನ್ನ ಲೇಖನ ಪುಡಿ ಚಿಲ್ರೆಗೆ very fine ಆಗಿಲ್ಲದಿದ್ದರೇನಂತೆ ಈ ಉತ್ಸಾಹ ವಾರ್ತೆ suits me very fine indeed !

—ಅ. ರಾ. ಸೇ.

ಕೊಲೆ ಆದಾಗ

—:೦:—

ಹಟ್ಟೀಬೀದಿ ಹಲಗಪ್ಪನ ಮೇಲೆ ಬ್ಯಾಡರ ಭೀಮಣ್ಣನಿಗೆ ಮೊದಲಿಂದಲೂ ಕಣ್ಣು. ಯಾವ ಸಂತೇಗೆ ಹೋಗಲಿ ಯಾವ ಗಿರಾಕಿನೂ ಸಿಗಲಿಲ್ಲ ಎಂದು ಬ್ಯಾಡರ ಭೀಮ, ತಂದಿದ್ದ ಸರಕನ್ನು ಹಲಗಪ್ಪನಿಗೆ ಮಾರಿಬಿಡ್ತಿದ್ದ. "ಕಾಡಿನಲ್ಲಿ ಅಲೆದಾಡಿ ಹುಲಿ ಕರಡಿಗಳನ್ನು ಶಿಕಾರಿಮಾಡಿ ಮಡಿಕೆ ಜೇನು, ಕರಡಿ ಉಗುರು, ಹುಲಿ ಕೊಬ್ಬು ಎಲ್ಲಾನು ಸಂಪಾದಿಸಿ ಮಾರುಕ್ಕೆ ಬಂದಿದ್ದಿ. ಯಾರೂ ಕೊಂಡಿಲ್ಲ. ಬರಿ ಕೈಲಿ ಹೋಗಬಾರ್ದು ನೀನು. ನಾ ಕೊಂಡುಕೋತೀನಿ ಏನು ರೊಕ್ಕ ಬೇಕು ನಿಂಗೆ" ಎಂದು ಹಲಗಪ್ಪ ಕೇಳ್ತಿದ್ದ. ಎರಡು ರೂಪಾಯಿಗೆ ಮಾರುಕ್ಕೆ ಸಿದ್ಧವಾಗಿದ್ದ ಭೀಮಣ್ಣ ನಾಲ್ಕು ರೂಪಾಯಿ ಎಂದು ಹೇಳುತ್ತಿದ್ದ. ಹಲಗಪ್ಪ ನಾಲ್ಕು ರೂಪಾಯಿಕೊಟ್ಟು ಕೊಂಡುಕೊಳ್ಳುತ್ತಿದ್ದ. ಈ ಸಾರಿ ಹಲಗಪ್ಪ ಕಳಕೊಂಡ ಎಂದು ಬ್ಯಾಡರ ಭೀಮಣ್ಣ ಹಿಗ್ಗುವ ಹೊತ್ತಿಗೆ; ಸಂತೆ ರಸ್ತೇಲಿ ಸಂಜೆಮುಂದೆ ಬಂದ ಬಸ್ಸಿನಲ್ಲಿದ್ದೊರು ಒಂದೊಂದು ಕುಡಿಕೆ ಜೇನಿಗೆ ನಾಲ್ಕು ರೂಪಾಯಿ, ಕರಡಿ ಉಗುರಿಗೊಂದು ರೂಪಾಯಿ, ಹುಲಿಕೊಬ್ಬಿನ ಪಟ್ಟಿಯೊಂದಕ್ಕೆ ಎಂಟು ರೂಪಾಯಿಕೊಟ್ಟು ಕೊಂಡು ಕೊಳ್ಳುತ್ತಿದ್ದರು. ಒಂದೊಂದು ಸಲ ಸಂಜೆ ಬಸ್ಸಿಗೆ ಕಾಯುತ್ತಾ ಬ್ಯಾಡರ ಭೀಮಣ್ಣ ಕಾದರೆ ಬಸ್ಸೇ ಬರುತ್ತಿದ್ದಿಲ್ಲ. ಬರಿ ಕೈಲಿ ಕಾಡಿಗೆ ಹೋಗಬೇಕಾಗುತ್ತಿತ್ತು. ಹೀಗಾಗಿ ಹಲಗಪ್ಪನಿಗೇ ಮಾರುತ್ತಾ ಇದ್ದ. ಮಾರಿದ ಒಂದು ಗಂಟೇಲಿ ಹಲಗಪ್ಪನ ಜೇಬು ತುಂಬಾ ರೂಪಾಯಿ ಕುಣಿಯೋದನ್ನು ಕಂಡು ಭೀಮಣ್ಣ ಕರುಬುತ್ತಾ ಇರುತ್ತಿದ್ದ. ಹಲಗಪ್ಪ ಮೂರು ಕುಚ್ಚು ಹೂವು ಕೊಂಡುಕೊಂಡು ಮೂರು ಮೂರು ಪೊಟ್ಟಣ ಖಾರಾಸೇವೆ ಬತ್ತಾಸು ಕೊಂಡುಕೊಂಡು ಹಟ್ಟೀಬೀದೀಗೆ ಹೊರಟಾಗ ಮೂರು ಚೆಂದುಳ್ಳಿ ಹೆಣ್ಣು ಕಟ್ಟಿಕೊಂಡು ಹಲಗಪ್ಪ ಮೋಜು ಮಾಡ್ತಾನಲ್ಲ! ಸಂತೇಗೆ ಬಂದು ಸಂಪಾದಿಸ್ತಾನೆ. ಕಾಡಿನಲ್ಲಿ ದುಡಿದ ನಂಗೆ ಇಷ್ಟೇನಾ ಎಂದು ಬ್ಯಾಡರ ಭೀಮಣ್ಣ ಹೇಳಿಕೊಂಡು ಹೊಟ್ಟೆಕಿಚ್ಚು ತೋಡಿಕೊಳ್ತಾ ಇದ್ದ.

ಒಂದು ಬೆಳಗಿನ ಝಾಮು ಹಟ್ಟಿಬೀದಿ ಕೆರೆ ಏರಿ ಮೇಲೆ ಹಲಗಪ್ಪನ ಹೆಣ ಕತ್ತರಿಸಿ ಬಿದ್ದಿತ್ತು. ಹಟ್ಟಿಬೀದೀಲೆಲ್ಲಾ ಗುಲ್ಲೋ ಗುಲ್ಲು. ಪೋಲೀಸಿನವರು ಬಂದರು. ಮಹಜರ್ ಮಾಡಿಸಿದರು. ಶವ ಪರೀಕ್ಷೆಗೆ ಡಾಕ್ಟರ ಹತ್ತಿರ ಹೋದರು. ಸಾಕಷ್ಟು ಸುದ್ದಿ ಗಳಿಸಿದರು. ಚಾಡಿಮಾತುಗಳನ್ನೆಲ್ಲಾ ಕೇಳಿದರು. ಕಡೆಗೆ ಮೊಕದ್ದಮೆ

ಹೊಡಿದರು. ಬ್ಯಾಡರ ಭೀಮಣ್ಣನಿಗೆ ಹಲಗಪ್ಪನ ಮೇಲೆ ಸೇಡಿತ್ತು. ಅವನೇ ಕೊಲೆ ಮಾಡಿರಬೇಕು. ಮಾಡಿದ್ದಾನೆ ಎಂದರು. ಬ್ಯಾಡರ ಭೀಮಣ್ಣನನ್ನು ಹಿಡಿದು ದಸ್ತಗಿರಿಮಾಡಿದರು. ಅನುಕೂಲವಾಗಿ ನಾಲ್ಕು ಸಾಕ್ಷಿಗಳು ಸಿಕ್ಕಿದರು.

ಹಲಗಪ್ಪನ ಹೆಣ ಸಿಕ್ಕಿದ ಹಿಂದಿನ ರಾತ್ರಿ ಬ್ಯಾಡರ ಭೀಮಣ್ಣನ ಜತೆಯಲ್ಲಿ ಬೆಳಗಿನ ಝಾಮು ೩ ಗಂಟೆತನಕ ಹಟ್ಟಿಬೀದಿ ಹಲಗಪ್ಪ ಮತ್ತು ನಾವಿಬ್ಬರೂ ಬಾಜಿ ಕಟ್ಟಿ ಇಸ್ಪೀಟ್ ಆಡ್ತಾ ಇದ್ದಿವಿ. ಭೀಮಣ್ಣ ಇದ್ದ ಹಣವನ್ನೆಲ್ಲಾ ಕಳಕೊಂಡಿದ್ದ. ಆಟ ಮುಗಿಸಿ ಎಲ್ಲರೂ ಎದ್ದೆವು. ಹಲಗಪ್ಪ ಭೀಮಣ್ಣ ಇಬ್ಬರೂ ಮನೆಕಡೆ ಹೊರಟರು. ನಾವು ಸಂತೆಮಾಳದ ಕಡೆಗೆ ಬಂದೆವು ಎಂದು ಸಾಕ್ಷ್ಯ ಕೊಡಲು ಇಬ್ಬರು ಸಿದ್ಧವಾಗಿದ್ದರು. ಅವರೇ ಕೊಲೆಯ ಮೊಕದ್ದಮೆಗೆ ಜೀವಾಳ.

ಕಿಕ್ಕಿರಿದ ನ್ಯಾಯಾಸ್ಥಾನದಲ್ಲಿ ಸಾಕ್ಷಿಗಳ ವಿಚಾರಣೆಯನ್ನು ಅನುಭವಸ್ಥ ಪೋಲಿಸ್ ತನಿಖಾ ಇನಸ್ಪೆಕ್ಟರು ನಡೆಸಿ ಮೇಲೆಕಂಡ ವಿಷಯವನ್ನು ಸ್ಥಿರೀಕರಿಸುವಾಗ "೩ ಗಂಟೆ ಆಗಿತ್ತು ಎಂದು ಹೇಗೆ ಗೊತ್ತಾಯ್ತು" ಎಂದು ಕೇಳಿದರು. ಮೊದಲ ಸಾಕ್ಷಿ ಹೇಳಿದ ಸಂತೆಮಾಳಕ್ಕೆ ಬರುತ್ತಿದ್ದಾಗ ಪೋಲೀಸ್ ಠಾಣೆಯು ಮುಂದೇನೇ ಬರಬೇಕು. ಅಲ್ಲಿ ಹಾಯ್ದಾಗ ಎಡಕ್ಕೆ ತಿರುಗಿದಾಗ ಠಾಣೆಯ ದೊಡ್ಡ ಗಡಿಯಾರ ಕಾಣಿಸಿತು. ಅದರಲ್ಲಿ ಮೂರು ಗಂಟೆ ಆಗಿತ್ತು ಎಂದರು. ಪೋಲೀಸ್ ಇನ್ಸ್ಪೆಕ್ಟರು ಮಂದಸ್ಮಿತರಾದರು—

ಪಾಟಿ ಸವಾಲು ಮಾಡಲು ಬ್ಯಾಡರ ಭೀಮಣ್ಣನ ಕಡೆಯ ವಕೀಲರು ಶುರು ಮಾಡಿದರು. ಕೊಟ್ಟ ಸಾಕ್ಷ್ಯದಲ್ಲಿ ಯಾವ ಹುಳುಕೂ ಸಿಕ್ಕಿರಲಿಲ್ಲ ಏನೆಂದು ಪಾಟೀ ಸವಾಲು ಮಾಡೋದು ಎಂದು ಯೋಚಿಸುತ್ತಲೇ ಇದ್ದರು.

ಆಗ ನ್ಯಾಯಾಸ್ಥಾನದ ಗಡಿಯಾರದಲ್ಲಿ ಮೂರುವರೆ ಗಂಟೆಯಾಗಿತ್ತು. ಒಂದು ಸಾರಿ ಗಡಿಯಾರವು ‘ ಠಣ್ ’ ಎಂದಿತು.

" ಈಗ ಎಷ್ಟಯ್ಯಾ ಗಂಟೆ" ಎಂದು ಮೊದಲಸಾಕ್ಷಿಯನ್ನು ಕೇಳಿದರು ಈಗ ಒಂದು ಗಂಟೆ ಎಂದ ಮೊದಲ ಸಾಕ್ಷಿ. ಇನ್ನೊಬ್ಬನು ಇದ್ದಲ್ಲಿಂದಲೇ ಗಡಿಯಾರ ನೋಡಿದರೆ ಕಾಣಿಸಾಕಿಲ್ವಾ ಒಂದು ಗಂಟೆ ಅಂತು ಬಡಿದಿದ್ದು ಕೇಳಿಸ್ದೆ ಇದ್ರೂನೂ ಎಂದು ದನಿಗೂಡಿಸಿದರು....ಪಾಟಿ ಸವಾಲು ಮುಗಿಯಿತು.

—ಪೋಲೀಸ್ ತನಿಖಾ ಇನ್ಸ್ಪೆಕ್ಟರು ಬೆಂದಸ್ಮಿತರಾದರು; ಬ್ಯಾಡರ ಭೀಮಣ್ಣ ಬಿಡುಗಡೆಯಾದ.

ಸೌಂದರ್ಯೋಪಾಸನೆ

ಬನಶಂಕರಮ್ಮನವರ ಮೂರನೇ ಮಗ ಮಾಧು ಅವನ ಹೆಂಡತಿನ ಕರೆದು ಕೊಂಡು ಬಂದ ದಿನ ನಮ್ಮ ಬೀದೀಲೆಲ್ಲಾ ಸಡಗರವೋ ಸಡಗರ. ಅವನ ಹೆಂಡತಿ ಎಂದರೆ ಅಂತಿಂಥವಳಲ್ಲ. ಬರ್ಮಿಯಳಂತೆ. ಅವಳ್ನ ನೋಡ್ಲಿಕ್ಕೆ ಆ ದಿನ ನಂಬೀ ದೀಲಿ ನೆರೆದಷ್ಟು ಜನ ಸಾಕ್ಷಾತ್ ಎಲಿಜಬೆತ್ ರಾಣೀನ ನೋಡ್ಲಿಕ್ಕೂ ನೆರೆದಿರ ಲಾರರು. ಅಂತೂ ಇಂತೂ ಈ ಬರ್ಮಾರಾಣಿ ಬಂದಳು. ಆದರೆ ಮುಚ್ಚಿದ್ದ ಟ್ಯಾಕ್ಸಿಯಲ್ಲಿ ಬಂದಳು. ಬಲಪಕ್ಕದ ಮನೆಯವರಿಗೆ ಆರಡಿ ಎತ್ತರದ ಮಾಧೂ ಮಾತ್ರ ಕಾಣಿಸಿದ. ಎಡಪಕ್ಕದ ಮನೆಯವರಿಗೆ ಮಾತ್ರ ಆ ಬರ್ಮಾ ರಾಣಿಯನ್ನು ಒಂದರೆಕ್ಷಣ ನೋಡುವ ಲಭ್ಯ ಲಭಿಸಿತು. ಮಿಕ್ಕವರು "ಊರಿಗೆ ಬಂದವ್ಳು ನೀರಿಗೆ ಬರೋಲ್ಲವೇ" ಎಂದುಕೊಂಡರು.

ಆದರೆ ಅವಳು ನೀರಿಗೆ ಬರಲಿಲ್ಲ. ಊರಲ್ಲಿದ್ದ ನಾವೇ ಒಮ್ಮೆ ನೀರಿಗೆ ಹೋದೆವು; ನಮ್ಮಗಳ ಮನೆಗಳ ನಲ್ಲಿಗೆ ಗಂಟ್ಲು ಕೆರೆತ ಅಂತ. ಅದೇ ತಾನೇ ಗುಡಿಯಿಂದ ಹಿಂತಿರುಗುತ್ತಿದ್ದ ಬನಶಂಕರಮ್ಮನವರ ದರ್ಶನ ಭೇಟಿಯೂ ಆಯಿತು. ನಾವೆಲ್ಲಾ ಆತುರದಿಂದ ಕೋರಸ್ ಕೂಗಿದೆವು. ಸೊಸೆ ಹೇಗೆ, ಏನು ಎತ್ತು ಅಂತ ಪ್ರಾಣಿ ಯಾಕೋ ಸಪ್ಪಗಿತ್ತು. ಕಣ್ಣೀರ್ಗರೆಯಿತು.

"ದೇವರು ನನಗೀ ಕಡೆಗಾಲದಲ್ಲಿ ಯಾಕೀ ಸಂಕ್ಟ ಕೊಟ್ಟನೋ."

"ಏನ್ರೀ ಏನಾಯ್ತು, ಮುದ್ದಾದ ರತ್ನದಂಥ ಸೊಸೆ ಬಂದಿದಾಳೆ, ನಾವೆಲ್ಲಾ ಕೋರಿಸ್ದಿದೆವು. ಒಕ್ಕೊರಲಲ್ಲಿ.

"ಏನು ಹೇಳ್ಲೀ ತಾಯಿರಾ, ನಮ್ಮಾಧೂ ಪುಣ್ಯಾನಾ. ಇವಳು ಬೇಡ, ಅವಳು ಬೇಡ ಅಂತಂದು ಅಂದೂ ಈ ಹೆಣ್ಣನ್ನ ಕಟ್ಕೊಂಡು ಬಂದ. ಎಷ್ಟು ಹೆಣ್ಹೆತ್ತೋವರ ಉಸಿರು ತಗುಲಿಯೋ; ಅದಕ್ಕೆ ಹುಚ್ಚು."

"ಹುಚ್ಚು!??" (ನಮ್ಮ ಕೋರಸ್ಸು)

"ಮಗ ಯಾರನ್ನಾದ್ರೂ ಕಟ್ಕೊಳ್ಳಿ, ನಾಳೆ ಕಣ್ಮುಚ್ಚೋ ನನಗ್ಯಾಕೇಂತ ಹಿಂದ್ಗಡೇ ಮನೇಲಿ ನಾನಿದ್ಬಿಟಿದೀನಿ ರಾಮಾಕೃಷ್ಣಾಂತ. ಮೊನ್ನೆ ತುಳಸೀ ಗಿಡಕ್ಕೆ ನೀರೆರೀತಿದ್ದೆ ನೋಡಿ ಮುಂದ್ಗಡೆ ಮನೆ ಕಿಟಕಿಯಿಂದಾಚೆ ಕೆಂಪು ಮೋರೆಯೊಂದು

ಗಡವ ಕೋತಿ ಹಾಗೆ ತಲೆ ಇಟ್ಟು. ಸಾಲದ್ದಕ್ಕೆ ಹಲ್ಲು ಬೇರೆ ಬಿಡ್ತಿತ್ತು. ಕಿಟ್ಟಂತೆ ಕಿರಿಚ್ಕೊಂಡು ನೀರಿನ ಚೊಂಬ್ನ ಅಲ್ಲೇ ಕುಕ್ಕಿ ಬಂದೆ. ಆಮೇಲೆ ಕೆಲಸದೋಳು ಹೇಳಿದ್ಲು ಅದು ಚಿಕ್ಕಮ್ಮನೊರು ಅಂತ. ಸುಧಾರಿಸ್ಕೊಂಡು ನೋಡಿದ್ರೆ ಅವ್ಳೇ ಕಾಣ್ರೀ ಆ ಬರ್ಮಿರ್ಣನೋ ಕೂರ್ಮಿರ್ಣನೋ, ಮುಖಕ್ಕೆಲ್ಲಾ ಎಂತದೋ ಹಚ್ಚಿಕೊಂಡು ಕಣ್ಣೆರಡು ಮಾತ್ರ ಪಿಳಿಪಿಳಿ ಬಿಟ್ಕೊಂಡು ನಿಂತಿದ್ಲು."

"ಹೇಗಾರೂ ಹೋಗ್ಲಿ ನನಗ್ಯಾಕೇ ಅಂತ ನಾನುಸುಮ್ಮನಿದ್ದೆ. ಮೊನ್ನೆ ಹಾಗೇ ದೃಷ್ಟಿಸಿ ನೋಡಿದರೆ ಹಾಲಿನಲ್ಲಿ ಎಳೇ ಮಕ್ಕಳ ತರಹ ಹಗ್ಗ ಆಡ್ತಿದ್ಲು ಸಾಲದ್ದಕ್ಕೆ ನೆಲದ ಮೇಲೆ ಈಜಾಡ್ತಾಳೆ ಕಣ್ರೀ. ನೀರು ನಿಡಿ ಏನೂ ಕಾಣೆ ಅಲ್ಲಿ. ಅದೊಂದೇ ಅಲ್ಲ, ಅಲ್ಲಿ ಹಗ್ಗ ಭಾವಿ, ನೀರು ಏನೂ ಕಾಣೆ, ಇವಳು ಮಾತ್ರ ಗಂಟೆಗಟ್ಲೆ ನೀರು ಸೇದೋರೀರೆ ಅದೇನೋ ಎಳೆದೆಳದು ಹಾಕ್ತಿರ್ತಾಳೆ. ತಲೆಮೇಲೆ ಪುಸ್ತಕದ ರಾಶಿ ಕಟ್ಕೊಂಡು, ಸೊಂಟದಮೇಲೆ ಕೈಯಿಟ್ಕೊಂಡು ನಿಮಿರಿನಿಂತು ಇಲ್ಲಿಂದ ಅಲ್ಲಿಗೆ ಅಲ್ಲಿಂದಿಲ್ಲಿಗೆ ನಡೀತಿರುತ್ತಾಳೆ."

"ಇವೆಲ್ಲಕ್ಕಿಂತ ಹುಚ್ಚಾಟ ಏನು ಗೊತ್ತಾ? ಮೊನ್ನೆ ಹಾಗೇ ನೋಡ್ತಿದ್ದೆ. ಬೋರ ಕಸಗುಡಿಸಿ ಸಾರಿಸಿ ಆಗತಾನೇ ಹೋಗಿದ್ರೆ ಇವಳೇನು ಮಾಡಿದ್ಲು ಗೊತ್ತಾ. ಒಂದಷ್ಟು ಪೇಪರು ತಂದ್ಲು; ಹರಿದ್ಲು ಚೂರು ಚೂರಾಗಿ. ಅದನ್ನೆಲ್ಲಾ ಅಕ್ಷತೆ ಕಾಳ್ಹಾಕ್ದಂಗೆ ಮನೇಲೆಲ್ಲಾ ತೂರಿದ್ಲು. ಆಮೇಲೆ ಒಂದು ಬುಟ್ಟೀ ತಂದು ಆ ಚೂರು ಪೇಪರನ್ನೆಲ್ಲಾ ಒಂದೊಂದನ್ನೇ ಎತ್ತಿ ಎತ್ತಿ ಬುಟ್ಟೀಗೆ ಹಾಕಿದ್ಲು. ಬಗ್ಗೋದು ಎತ್ತೋದು ಹಾಕೋದು. ಸುಮಾರು ಒಂದು ಘಂಟೆ ಮಾಡಿದಾಳೆ ನೋಡಿ ಆ ಕೆಲಸಾನ."

"ಒಳ್ಳೇ ಸಿನೀಮಾ ಕಣ್ರೀ ಸಿನೀಮಾ, ಹೊಟ್ಟೇ ಉರಿದ್ಹೋಗುತ್ತೆ ಅದಕ್ಕೇನು ಸಂಕಟವೋ ತಿಳಿದುಕೊಳ್ಳೋಣಾಂದ್ರೆ ಅವಳ್ಮಾತು ನನಗ್ಬರದು ನಂಭಾಷೆ ಅದಕ್ಬರೋಲ್ಲ. ಮಾಧೂಗೆ ಹೇಳಿದ್ರೆ "ಬಿಡಮ್ಮ ಅವಳಿಗೇನಾಗಿಲ್ಲ. ಅವಳದೆಂಥದೋ ಮಾಡ್ತಾಳೆ" ಅಂದ್ಬಿಡ್ತಾನೆ. ಅವನ ಎದುರ್ಗೇ ಇದನ್ನೇಲ್ಲಾ ಮಾಡಿದರೂ ಅವನೇನೂ ಹೇಳದೆ ಪುಸ್ತಕ ಹಿಡಕೊಂಡು ಕೂತಿರ್ತಾನೆ. ಮೋಹಿನೀ ಪಿಶಾಚೀ ಹಿಡಿದ್ರೆ ಹೀಗೇನಂತೆ ನಾನಂತೂ ಹರಸಿಕೊಳ್ಳಿದ ದೇವರಿಲ್ಲ ನಮ್ಮ ರಾಮಚಂದ್ರೂ, ಸೀನಿ, ಎಲ್ಲಾರ್ಗೂ ಬರಹೇಳ್ತೀನಿ. ನನಗ್ಯಾಕೋ ಭಯವಾಗುತ್ತೆ." ಬನಶಂಕರಮ್ಮನವರ ಕಣ್ಣಿನಲ್ಲಿ ಮತ್ತೆ ಬಳಬಳನೆ ನೀರು ಬಂತು.

ಸಾಯಂಕಾಲ ವಿಷಯ ತಿಳಿದು ನಮ್ಮ ತಂದೆ ಮಾಧೂವನ್ನು ವಿಚಾರಿಸಿದರು. ಅವನು ಬಿದ್ದು ಬಿದ್ದು ನಕ್ಕ.

" ಓ ! ಅಮ್ಮ ನಿಮಗೂ ಹೇಳಿದಾಳೋ, ನನ್ನ ವೈಫ್‌ಗೇನಿಲ್ಲ ಅವಳು ಬ್ಯೂಟೀ ಹಿಂಟ್ ಅನುಸರಿಸುತ್ತಾಳಷ್ಟೇ "

" ಏನು ಹಾಗಂದ್ರೆ ? " ನಮ್ಮ ತಂದೆ ಕೇಳಿದರು.

" ಬ್ಯೂಟೀ ಹಿಂಟ್ ಅಂದ್ರೆ ಸೌಂದರ್ಯ ಹೇಗೆ ಹೆಚ್ಚಿಸಿಕೊಳ್ಳೋದು ? ಕಾಪಾಡಿಕೊಳ್ಳೋದು ಎನ್ನೋ ಸಲಹೆಗಳು. ಮುಖಕ್ಕೆ ಒಂದು ಸ್ಪೆಷಲ್ ಮಣ್ಣು ಸಿಕ್ಕುತ್ತೆ ಎಲ್ಲಾ Chemical preparation ಅದಕ್ಕೆ ಮಡ್‌ಪ್ಯಾಕ್ ಅಂತಾರೆ. ಅದನ್ನು ಮುಖಕ್ಕೆ ಬಳಿದುಕೊಂಡರೆ ಮುಖದಲ್ಲಿ ಬಿಗಿತ ಬಂದು ಮುಖದ ಸುಕ್ಕೆಲ್ಲಾ ಹೋಗುತ್ತದೆ. ಹಗ್ಗ ಆಡೋದು ನೀರು ಸೇದೋಹಾಗೆ ಮಾಡೋದು ಈಜಾಡೋದೆಲ್ಲಾ ಅಂಗಸಾಧನೆ. ಪೇಪರ್ ಹರಿದ್ಹಾಕೋದೂ ಅಷ್ಟೆ ಸಿಂಹಕಟಿಯಾಗೋಕೆ ತೆಳ್ಳಗೆ ಇರೋದಕ್ಕೆ ಉಪಾಯಗಳು........ಇದೆಲ್ಲಾ ಹುಚ್ಚೇ ? "

" ಸರಿಯಪ್ಪ, ಇದು ಹುಚ್ಚಲ್ಲಿದಿದ್ದರೆ ಮತ್ಯಾವುದು ಹುಚ್ಚು ? " ಅಂದ ನಮ್ಮ ತಂದೆ ಅವನ ಬೆನ್ನಹಿಂದೆ ನಿಟ್ಟಿಸುರಿಟ್ಟರು.

" ಆ ಬ್ಯೂಟೀ ಹಿಟ್ಸು ಎಲ್ಲಿ ಸಿಕ್ಕುತ್ತೇ ಅಣ್ಣಾ " ಎಂದು ನನ್ನ ತಂಗಿ ಕೇಳಿದಳು.

" ನಡಿಯೇ ನೀರ್ಸೇದಿ ಬಗ್ಗಿ ಕಸಗುಡಿಸು " ತಂದೆ ಘರ್ಜಿಸಿದರು.

—ನಾಗರತ್ನ.

— o —

ವೀರ ಸ್ವರ್ಗಕ್ಕೆ ಶಿವಾಜಿಯು ಹೋದಾಗ, ಊರ್ವಶಿಯೇ ಛತ್ರಪತಿಗೆ ಆರತಿ ಬೆಳಗಿ ಎದುರ್ಗೊಂಡು ಸ್ವಾಗತಿಸಿದಳಂತೆ.

ಸ್ವಾಗತಿಸುತ್ತಾ " ಛತ್ರಪತಿಗಳೇ, ಯುದ್ಧ ಮಾಡುವಾಗ ನಿಮ್ಮ ಕಡೆಯ ಸೈನಿಕರ ಬಲ ಅಷ್ಟು ಹೆಚ್ಚಾಗಿಲ್ಲ ಎಂದು ತಿಳಿದಿದ್ದರೂ, ಮುನ್ನುಗ್ಗಿ ಕದನ ಮಾಡಿದ ಮಾಡಿದರಲ್ಲಾ ! ಆ ಧೈರ್ಯ ಹೇಗೆ ಬಂತು " ಎಂದು ಕೇಳಿದಳಂತೆ.

" ಮಾಡಬೇಕು ಅನ್ನಿಸ್ತು ! ದೇವರ ಮೇಲೆ ಭಾರ ಹಾಕಿ ನುಗ್ಗಿದೆ " ಎಂದನಂತೆ ಸಾಮ್ರಾಟ್ ಶಿವಾಜಿ ಛತ್ರಪತಿ.

" ನನ್ನ ಹಾಗೇನೇ ! ಅನ್ನಿ " ಎಂದು ಕೊಂಕು ಕಣ್ಣು ಕಿಡಿ ಹಾರಿಸಿದಳಂತೆ ಊರ್ವಶಿ.

ನಮ್ಮೂರಿನ ಹೆಮ್ಮೆ

—:o:—

ನಮ್ಮೂರಿನ ಜನ ಗಾಂಧೀ ಭಕ್ತರು. ಅವರಿಗೆ ಗಾಂಧೀಜಿಯವರನ್ನು ಎಷ್ಟು ಗೌರವಿಸಿದರೂ ತೃಪ್ತಿಯಿಲ್ಲ. ಗಾಂಧೀಜಿ ಸ್ವದೇಶಿ ಚಳುವಳಿ ಹೂಡಿದಾಗ ನಮ್ಮವರು ಮ್ಯಾಂಚೆಸ್ಟರ್ ಮಲ್ಲುಗಳನ್ನೇ ಉಟ್ಟು ತಮ್ಮ ನಿಷ್ಠೆಯನ್ನು ತೋರಿಸಿದರು. ೧೯೪೨ರಲ್ಲಿ ದೇಶದಲ್ಲೆಲ್ಲ ಜನ ಜೈಲುವಾಸಕ್ಕೆ ಮುಂದಾದರೆ ನಾವು Underground ಇದ್ದೆವು ಹಾಗಿದ್ದು ಕಾಳಸಂತೆಯಲ್ಲಿ ಸಾಕಷ್ಟು ಗಳಿಸಿದೆವೆಂದು ಅನ್ನುವವರು ಅಂದುಕೊಳ್ಳುತ್ತಾರೆ ಅಂದುಕೊಳ್ಳಲಿ ಅಂತೂ ಯಥಾನುಶಕ್ತಿ ಗಾಂಧೀ ಭಕ್ತರಾಗಲು ಪ್ರಯತ್ನಿಸುತ್ತ ಹಿಂಸೆ ಸಾಧ್ಯವಾಗದಾಗಲೆಲ್ಲ ಅಹಿಂಸೆಯಲ್ಲೇ ತೃಪ್ತಿ ಪಟ್ಟುಕೊಂಡು, ಆ ಹಿಂಸೆಯಿಂದ ಪ್ರಯೋಜನವಿಲ್ಲದಾಗ ಹಿಂಸೆಗೆ ಹಿಂಜರಿಯದೆ, ಉಪಯುಕ್ತತೆಯ ಮೇಲೆ ಹೊಂದಿಕೊಂಡು ಸತ್ಯ ಅಸತ್ಯಗಳನ್ನು ಬಳಸಿ, ವಿಪರೀತ ಅನ್ಯಾಯಕ್ಕಿಳಿಯದೆ, ಇಳಿದರೂ ನಾಲ್ಕು ಜನರ ಕಣ್ಣಿಗೆ ಬೀಳುವಂತೆ ಅನ್ಯಾಯ ಮಾಡದೆ ಅಷ್ಟೋ ಇಷ್ಟೋ ಗಾಂಧೀ ತತ್ವವನ್ನು ಪಾಲಿಸಲು ಪ್ರಯತ್ನಿಸಿದೆವೆಂಬ ಸಮಾಧಾನ ನಮಗಿದೆ.

ಆದರೆ ಬಹಳವಾಗಿ ಬೆಳೆದು ವಿಸ್ತರಿಸಿದ ನಮ್ಮ ನಗರದಲ್ಲಿ ಒಂದು ಗಾಂಧೀ ವಿಗ್ರಹವಿಲ್ಲವೆಂಬ ಕೊರತೆಯೊಂದಿತ್ತು. ಒಂದು ಗಾಂಧೀ ಜಯಂತಿಯ ದಿನ ಅಧ್ಯಕ್ಷ ಪೀಠದಿಂದ ಮಂತ್ರಿವರ್ಯರೊಬ್ಬರು ಈ ಐಬನ್ನು ಎತ್ತಿ ತೋರಿಸಿಯೇ ಬಿಟ್ಟರು. "ನನಗೇನೋ ಕಂಚಿನ ಪ್ರತಿಮೆ ಮಾಡಿಸಿ ಮಾರ್ಕೆಟ್ ಚೌಕದಲ್ಲಿಟ್ಟು ಗೌರವ ತೋರಿಸಿದಿರಿ; ಗಾಂಧೀಜಿ ಕೂಡ ದೊಡ್ಡ ದೇಶಭಕ್ತರೇ" ಎಂದು ಅವರು ಎಚ್ಚರಿಸಿದಾಗ ನಮ್ಮ ಜನರು ಕಣ್ಣು ತೆರೆದರು.

ಸರಿ ವಿಗ್ರಹವೊಂದನ್ನು ತಯಾರಿಸಿ ನಿಲ್ಲಿಸಿ ನಾವು ಪರಿಪಾಲಿಸಿದ ಗಾಂಧೀ ತತ್ವಗಳಿಗೆ ಪುಟವಿಕ್ಕಲು ನಗರ ಸಭೆ ಮುಂದಾಯಿತು. ಉತ್ತರ ಇಂಡಿಯಾದ ಕಡೆಯಿಂದ ಅಮೃತಶಿಲೆಯ ಅಥವಾ ಕಂಚಿನ ವಿಗ್ರಹ ಮಾಡಿಸಿ ತರಿಸಬೇಕೆಂದು ಕೆಲವರೆಂದರು. ಕೂಡದು, ಸ್ಥಳೀಯ ಕಲಾವಿದರನ್ನು ಪ್ರೋತ್ಸಾಹಿಸುವುದು ಅಗತ್ಯ ಎಂದರು ನಗರ ಸಭಾಧ್ಯಕ್ಷರು ಅಲ್ಲದೆ ಮಾಜಿ ನಗರ ಸಭಾಧ್ಯಕ್ಷರ (ಅವರು ಹಾಲಿ ಅಧ್ಯಕ್ಷರ ತೀರ್ಥರೂಪರು) ಕಂಚಿನ ವಿಗ್ರಹಕ್ಕೆ ಆಗಲೇ ಆರ್ಡರ್ ಕೊಟ್ಟಿರುವುದರಿಂದ

ಹೆಚ್ಚಿನ ವೆಚ್ಚಮಾಡುವ ಶಕ್ತಿ ನಗರಸಭೆಗಿಲ್ಲ ಆದುದರಿಂದ ಸರಳತೆಯ ಮೂರ್ತಿ ಗಾಂಧೀಜೀಗೆ ಸಿಮೆಂಟಿನ ವಿಗ್ರಹ ಮಾಡಬಹುದಾದರೆ ಅದೂ ಸಾಕು ಎಂದು ವಾದಿಸಿದರು.

ಸರಿ ಪ್ರತಿಮೆ ಸಿದ್ಧವಾಯಿತು. ಚೌತಿ ಗಣಪತಿಗಳನ್ನು ಒದಗಿಸುತ್ತಿದ್ದ ಸ್ಥಳೀಯ ಶಿಲ್ಪಿ ಶೀನಪ್ಪನೇ ಗಾಂಧೀ ವಿಗ್ರಹವನ್ನು ತಯಾರಿಸಿದ. ಆದರೆ ಆತ ವಿಗ್ರಹ ತಯಾರಿಸಲು ಗಾಂಧೀಜಿಯವರನ್ನು ಹೋಲುತ್ತಿದ್ದ ರಿಟೈರ್ಡ್ ಮೇಷ್ಟರೊಬ್ಬರನ್ನು ಮಾಡಲ್ ಆಗಿ ಇಟ್ಟುಕೊಂಡ. ಆಗ ಒಂದು ಅನಾಹುತವಾಯಿತು. ಆ ಗಾಂಧೀ ಮೇಷ್ಟರ ಮೀಸೆಯೂ ವಿಗ್ರಹದಲ್ಲಿ ಮೂಡಿತು 'ಇರಲಿ ಬಿಡಿ ಗಾಂಧಿಜೀಯವರಿಗೂ ಒಂದು ಕಾಲದಲ್ಲಿ ಮೀಸೆಯಿರಲಿಲ್ಲವೇ?' ಎಂದು ಸಂಶೋಧಕ ವೃತ್ತಿಯ ಸದಸ್ಯರೊಬ್ಬರು ಸವಾಲು ಹಾಕಿದರೂ ಗಾಂಧೀಜಿ ಪ್ರತಿಮೆಯ ಮುಖದಲ್ಲಿ ಮೀಸೆಯುಳಿಯಲು ಮಹಿಳಾ ಸದಸ್ಯರು ಬಡಪಟ್ಟಿಗೆ ಒಪ್ಪಲಿಲ್ಲ. ಈಗ ಅವರು ಬದುಕಿ ಉಳಿದಿದ್ದರೆ ಮೀಸೆಯಿರುತ್ತಿರಲಿಲ್ಲ ಎಂಬ ವಾದವೇ ಗೆದ್ದು ವಿಗ್ರಹದಿಂದ ಮೀಸೆಯನ್ನು ಕೆರೆದು ತೆಗೆಯಬೇಕಾಯಿತು ಶೀನಪ್ಪ.

ವಿಗ್ರಹವೇನೋ ಸಿದ್ಧವಾಯಿತು. ಆದರೆ ನಗರದಲ್ಲಿ ಅದನ್ನೆಲ್ಲಿಡುವುದೆಂಬ ಸಮಸ್ಯೆಯು ಎದುರಾಯಿತು. ಆಯಕಟ್ಟಿನ ಸ್ಥಳಗಳಲ್ಲೆಲ್ಲ ಆವರಿವರ ಪ್ರತಿಮೆಗಳು ಬರಿದು ನಿಂತಿದ್ದವು. ಮೈದಾನದ ಪಕ್ಕದ ಚೌಕದಲ್ಲಿ ಮಾತ್ರ ಒಂದು ಸೀಟು ಖಾಲಿಯಿತ್ತು. ಮಾತ್ರವಲ್ಲದೆ ಅಲ್ಲಿ ಒಂದು ಪೀಠವೂ ಸಿದ್ಧವಾಗಿತ್ತು ಮಾಜಿ ಮಂತ್ರಿಗಳ ವಿಗ್ರಹವೊಂದು ಅಲ್ಲಿ ಬಂದು ಕೂರಬೇಕಾಗಿತ್ತು. ಆದರೆ ಆ ಕುರಿತು ಎರಡು ಕೋಮುಗಳಲ್ಲಿ ವಿವಾದವೆದ್ದು ಗಂಡಾಗುಂಡಿಯಾಗಿ ವಿಗ್ರಹ ಪುಡಿ ಪುಡಿಯಾಗಿತ್ತು. ಆದುದರಿಂದ ಗಾಂಧೀಜಿಗೆ ಆ ಪೀಠದ ಸ್ಥಾನ ಸಿಕ್ಕಿತು. ಪ್ರತಿಮೆಯನ್ನು ಅನಾವರಣಗೊಳಿಸಲು ಬಂದ ಉಪಸಚಿವರು ಬಾಪೂಜೀಯವರ ಪ್ರತಿಮೆಯನ್ನು ಅಂಥ ಜನ ಸಂದಣಿ ಸೇರುವ ಸ್ಥಳದಲ್ಲಿರಿಸಿದ್ದರಿಂದ ಅವರು ಜನಪ್ರಿಯರಾಗಲು ಅವಕಾಶವಾಯಿತೆಂದು ಆನಂದವನ್ನು ವ್ಯಕ್ತಪಡಿಸಿದರು. ಅವರು ಹಾಗಂದಾಗ ಸಭಿಕರೆಲ್ಲ ಕಿವಿ ಕಿವುಡಾಗುವಂತೆ ಚಪ್ಪಾಳೆ ಕುಟ್ಟಿದರು ಎಂಬುದನ್ನೂ ಮರೆಯುವಂತಿಲ್ಲ.

ಸರಿ. ಕಬ್ಬಿಣದ ಸರಪಳಿಯ ಬೇಲಿಯ ನಡುವೆ ಮೀಸೆ ಮೈನಸ್ ಆದ ಗಾಂಧೀ ವಿಗ್ರಹ ಬಂದು ನಿಂತಿತು. ಯಾವುದೋ ಕಾರಣದಿಂದ ನಮ್ಮ ಸಿಟಿ ಬಸ್ ನಿಲ್ದಾಣವನ್ನು ಬದಲಾಯಿಸಬೇಕಾಯಿತು ಆ ಬಸ್ಸುಗಳೆಲ್ಲ ಗಾಂಧೀಚೌಕವನ್ನು ಸುತ್ತಿಕೊಂಡು ಹೋಗುವ ಹೊಸ ಏರ್ಪಾಡು ಬಂತು. ಅದನ್ನು ಟೀಕಿಸಿದಾಗ ಸಂಬಂಧ ಪಟ್ಟವರು ಬಾಪೂ ಪ್ರತಿಮೆಯನ್ನ ಸುತ್ತಿಕೊಂಡು ಹೋಗುವ ಸೌಲಭ್ಯ ಯಾವ ನಾಗರಿಕನಿಗೆ ಬೇಕಿಲ್ಲ ಎಂದು ತಮ್ಮ ಏರ್ಪಾಡನ್ನು ಸಮರ್ಥಿಸಿಕೊಂಡರು.

ಸಿಟಿ ಬಸ್ಸುಗಳೆಲ್ಲ ಸುತ್ತಿಕೊಂಡು ಹೋಗುವ ಸೌಲಭ್ಯದಿಂದ ಗಾಂಧಿಯವರ ವಿಗ್ರಹದ ಮೇಲೆ ಅರ್ಧ ಇಂಚು ಧೂಳು ಕುಳಿತು ಅದು ತಾಮ್ರದ ವಿಗ್ರಹದಂತೆ ಕಂಗೊಳಿಸಿತು. ಧೂಳು ಹೊಡೆಸಲು ಆಳನ್ನು ಗೊತ್ತು ಮಾಡಿದಾಗ ಆತ ಕೊಳೆತ ವಸ್ತ್ರವನ್ನು ದಿನ ದಿನವೂ ಗಾಂಧಿಯವರ ತಲೆಯ ಮೇಲೆ ಆಡಿಸತೊಡಗಿದ ಸ್ವಲ್ಪ ಸಮಯದ ನಂತರ ಆತನಿಗೆ ಬಲಗೈ ಉಳುಕಿದಾಗ ಗಾಂಧಿಯವರ ಶಾಪ ಎಂದು ಯಾರೊ ಅಂದರಂತೆ. ಆತ ನಿಜವೆಂದು ನಂಬಿ ಕೆಲಸಬಿಟ್ಟನಂತೆ.

ಅನಂತರ ಸ್ವಲ್ಪ ಸಮಯದಲ್ಲಿ ವಿಗ್ರಹಕ್ಕೆ White wash ಹಾಕಿದ ಒಂದು ಕಳೆ ಬಂತು. ಕಾಗೆಗಳ ಕಾಟ ಅನ್ನಿ. ಮೊನ್ನೆ ಸಿಟಿ ಬಸ್ಸಿನಲ್ಲಿ ಹೋಗುತ್ತಿದ್ದಾಗ ಪುಟ್ಟ ಪೋಕರಿಯೊಂದು ಗಾಂಧಿಯವರ ತಲೆಯ ಮೇಲೆ ಟವಲು ಹಾಕಿದ್ದಾರೆ ಎಂದು ತೊದಲಿತು. ಫ್ಲಡ್‌ಲೈಟ್ ಬೇರೆ ಹಾಕಿಸಿದ್ದಾರೆ ವಿಗ್ರಹದ ಸುತ್ತಲೂ ಆ ಬೆಳಕಿನಲ್ಲಿ ಕಾಗೆಗಳ ಪ್ರಸಾದ ಟವಲಿನ ಹಾಗೆ ಕಾಣಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಅಂತೂ ನಮ್ಮೂರಿನ ಗಾಂಧೀ ವಿಗ್ರಹವನ್ನು ಕಂಡವರು ಮರೆಯುವಂತಿಲ್ಲ. ಆ ಚೌಕದ ಮೂಲೆ ಮೂಲೆಯಲ್ಲಿ ರಾಕ್ಷಸಾಕಾರದ ಸಿನಿಮಾ ಪೋಸ್ಟರುಗಳು, ಕುಸ್ತಿ ಕಾಳಗ, ಸರ್ಕಸ್, ಇಲೆಕ್ಷನ್ ಜಿದ್ದಾ ಜಿದ್ದಿಗಳ ಭಿತ್ತಿ ಪತ್ರಗಳು-ನಡುವೆ ಸೆರೆನಿಂತ ಗಾಂಧೀ ವಿಗ್ರಹ. ಸಿನಿಮಾದ ಸೊಕ್ಕಿದ ತಾರಾಮಣಿಗಳು ವಿವಿಧ ಭಂಗಿಯಲ್ಲಿ ನಿಂತು ಗಾಂಧಿಯವರನ್ನು ಅಣಕಿಸಿ, ಸೆಣೆಸಿದಂತೆ ಕಾಣುವಾಗ ಆ ದೃಶ್ಯವನ್ನು ಕಣ್ಣು ಮುಚ್ಚಿಕೊಂಡೇ ನೋಡಬೇಕು.

ಮೊನ್ನೆ ಜನವರಿ ಮೂವತ್ತರಂದು ಭಾಷಣಕಾರರೊಬ್ಬರ ಮಾತಿನ ಭರದಲ್ಲಿ "ಗಾಂಧೀಜಿಯವರ ನನಸು ಕನಸಾಯಿತು" ಎಂದು ತೃಪ್ತಿಯಿಂದ ನುಡಿದರು. ಅಲ್ಲ ಎನಲು ಯಾರಿಗೆ ಧೈರ್ಯವಿದೆ?

ಅಂತೂ ಗಾಂಧೀ ಪ್ರತಿಮೆ ನಮ್ಮೂರಿನ ಹೆಮ್ಮೆ!

—ರಾಮಿ.

ಮನೇನ ಭೋಗ್ಯ ಹಾಕಿ,
—ಚುನಾವಣೇಗೆ ನಿಂತುಕೊಂಡನಂತೆ

* * * *

ಮಂತ್ರಿ ಹಿಂದಿಧಾನೆ ಅಂತ
ಕಂತ್ರಿ ಚುನಾವಣೆಗೆ ನಿಂತ
ಮಂತ್ರಿ ಕಂತ್ರಿಯಾದ
ಕಂತ್ರಿ ಮಂತ್ರಿಯಾದ.

ನಮ್ಮ ಚೂಟಿ ಲಲಿತೆ

ಎರಡನೆ ವರ್ಷ ಆನರ್ಸ್‌ಗೆ ಓದುತ್ತಾ ಇದ್ದಳು ಲಲಿತೆ. ಬಲು ಚೂಟಿ ಹುಡುಗಿ. ಧೈರ್ಯ ಅಂದರೆ ಅಂತಿಂಥಾ ಧೈರ್ಯ ಅಲ್ಲ.

ಪುರಭವನದಲ್ಲಿ ಯಾತರದೋ ಸಹಾಯಾರ್ಥಕ್ಕಾಗಿ ವೈಜಯಂತಿಮಾಲಾಳ ನೃತ್ಯವನ್ನೇರ್ಪಡಿಸಿದ್ದರು. ಇಪ್ಪತ್ತೈದು ರೂಪಾಯಿನಿಂದ ನೂರು ರೂಪಾಯಿನ ವರೆಗೆ ಪ್ರವೇಶಧನ ಹೇರಿಸಲಾಗಿತ್ತು.

ಕಾಲೇಜು ಹುಡುಗಿ ಲಲಿತೆಗೆ ಇಷ್ಟು ಹಣ ತೆರೋದು ಸುಲಭವೂ ಅಲ್ಲ ಇಷ್ಟವೂ ಇರಲಿಲ್ಲ. ಆದರೆ ನೃತ್ಯ ನೋಡಬೇಕು ಅಂತ ಆಸೆ. ಯಾರೋ ಹೇಳಿ ಬಿಟ್ಟಿದ್ದರು "ಲಲಿತೆ! ನೀನು ಥೇಟ್ ಸಂಧ್ಯಾ ತರಹಾನೆ ಇದಿ ಕಣೆ" ಅಂತ. ಆನರ್ಸ್ ಆದಮೇಲೆ ಚಿತ್ತರಂಗಕ್ಕಿಳಿಯಬೇಕು ಎಂದು ಲಲಿತಳ ಬಯಕೆ.

ಧೈರ್ಯ ಅಂದೆ ಅಲ್ಲವೇ! ನೃತ್ಯದ ಸಂಜೆ ಆರು ಗಂಟೆಗೆ ಸರಿಯಾಗಿ ಲಕ್ಷಣ ವಾಗಿ ಶೃಂಗಾರಮಾಡಿಕೊಂಡು ಪುರಭವನದ ಬಳಿಗೆ ಬಂದಳು. ಮೆಟ್ಟಲು ಹತ್ತಿ ಬಾಗಿಲ ಬಳಿಗೆ ಹೋದಳು.

"ಟಿಕೆಟಿಲ್ಲೀಮ್ಮಾ" ಎಂದ ಅಲ್ಲಿದ್ದ ದ್ವಾರಪಾಲಕ.

"ಟಿಕೆಟ್ಟು! ನಾನು ಶಾಂತಾರಾಂ ಹೆಂಡತಿ ಗೊತ್ತಿಲ್ವೆ" ಎಂದಳು ಲಲಿತೆ

"ಹಾಗೇಮ್ಮ!" ಅಂತ ದ್ವಾರಪಾಲಕ ಉಸಿರೆಳೆದ.

"ನಿಮ್ಮ ಯಜಮಾನ್ರು ಆಗಲೇ ಬಂದಿದ್ದಾರಮ್ಮ. ಅವರ ಹತ್ತಿರಕ್ಕೇ ಕರಕೊಂಡು ಹೋಗ್ತೀನಿ" ಎಂದು ದ್ವಾರಪಾಲಕ ವಿನಯದಿಂದ ಒಳಕ್ಕೆ ನಡೆದ.

ಸೋತು ಹೋಗುತ್ತಿದ್ದ ತೊಡೆಗಳನ್ನೆಳೆದು ಲಲಿತೆ ಹೋದಳು.

ಸೋಫಾದ ಮೇಲಿದ್ದವನ ಬಳಿ ದ್ವಾರಪಾಲಕ ನಿಂತು "ನಿಮ್ಮ ಹೆಂಡತಿ ಯರು ಬಂದಿದ್ದಾರೆ" ಎಂದ. ಆತ ಎದ್ದ. ದೇಶಾವರದ ನಗೆ ತೋರಿದ ಲಲಿತೆ ಕುಳಿತಳು ಅವನೂ ಕುಳಿತುಕೊಂಡ. ದ್ವಾರಪಾಲಕ ಈ ಜೋಡಿ ನೋಡಿ ಹಿಗ್ಗುತ್ತಾ ಹೊರಟು ಹೋದ.

ಗೋಗರೆಯುವ ದನಿಯಲ್ಲಿ ಆತ ಹೇಳಿದ "ತಾಯಿ! ತಪ್ಪಾಯಿತು ನಂದು. ಶಾಂತಾರಾಂ ನಾನು ಎಂದು ಸುಳ್ಳು ಹೇಳಿ ಬಂದೆ. ಎಲ್ಲರೂ ನೀನು ಶಾಂತಾರಾಮರ ಹಾಗೆ ಇದಿ ಎಂದಿದ್ದು. ಆದರೆ ಆತನ ಹೆಂಡತಿ ಇಲ್ಲಿಗೆ ಬಂದಿದ್ದಾಳೆ ಎಂದು ಗೊತ್ತಿರಲಿಲ್ಲ. ನೀವು ಸುಮ್ಮನೆ ಇದ್ದು ನನ್ನ ಮಾನ ಉಳಿಸಿದ್ರಿ" ಎಂದ.

ಲಲಿತೆ ಆಗಂದುಕೊಂಡಳು "ನನ್ನ ಮಾನಾನ ನೀನು ಇನ್ನುಮೇಲೆ ಉಳಿಸ ಬೇಕು" ಎಂದು. ಆದರೆ ಮಾತಾಡಲಿಲ್ಲ.

‘ ನಿ ದ್ರಾ ಚಾ ರಿ ’

ಮದ್ರಾಸಿನ ಸುಪ್ರಸಿದ್ಧ ಹುಚ್ಚರ ವೈದ್ಯ-ಡಾಕ್ಟರ್ ಭುಜಂಗರಾಯರನ್ನು ಹೆದರಿಸಿ ಓಡಿಸಿದ ಮೇಲೆ ನಾನು ನಮ್ಮ ನಾಗತ್ತೆಯನ್ನು ಭೇಟಿಯಾಗಿರಲಿಲ್ಲ. ವಿಷಯ-ನಿಮಗೆ ಜ್ಞಾಪಕ ವಿರಬಹುದು-ನಮ್ಮ ನಾಗತ್ತೆ ನನ್ನನ್ನು ಇದೇ ಡಾ॥ ಭುಜಂಗರಾಯರ ಅಳಿಯನನ್ನಾಗಿ ಮಾಡಲು ಎಣಿಸಿದ್ದರು. ಶೌರಿಯ ಚಮತ್ಕಾರ ದಿಂದ ತಪ್ಪಿಸಿಕೊಂಡಿದ್ದೆ. ಆಮೇಲೆ ಮೈಸೂರು ಬಿಟ್ಟು ಅಲ್ಲಿ ಇಲ್ಲಿ ಅಲೆದಾಡುತ್ತ ವಿಷಯದ ಹರಿತ ಕಡಿಮೆಯಾದ ಮೇಲೆ ಪುನಃ ಮೈಸೂರು ಸೇರಿದೆ. ನಮ್ಮ ಮೈಗಳ್ಳರ ಸಂಘದ ಚಟುವಟಿಕೆಗಳಲ್ಲಿಯೂ ಭಾಗವಹಿಸಲು ಶುರು ಹಚ್ಚಿದೆ.

“ ರಾಮಪುರದಿಂದ ಆಳು ಬಂದಿದ್ದಾನೆ ಸರ್ ”-ಅನ್ನುತ್ತಾ ಒಂದು ದಿನ ನನ್ನ ಮುಂಜಾನೆಯ ಕಾಫಿ ತಂದ ಶೌರಿ ಪ್ರಕಟಿಸಿದಾಗ-ನನ್ನ ಎದೆಬಡಿತ ಎರಡು ಹೆಜ್ಜೆ ಮುಗ್ಗರಿಸಿತು.

“ ಏನಂತೆ ಶೌರಿ ? ”

“ ಇಂದೇ ನೀವು ರಾಮಪುರಕ್ಕೆ ಹೋಗಬೇಕಂತೆ ಸರ್ ”

“ ಅಂದರೆ....ಭೀ....”

“ ಅಲ್ಲ ಸರ್ ನಾಗಮ್ಮನವರ ಆ....ಇಚ್ಛೆ ಸರ್ ”

ಅಂದೇ ನಾನೂ ಶೌರಿ ಓವೆಲ್ಲಿನಲ್ಲಿ ಸುಮಾರು ಮೂರನೆಯ ರೇಸಿನ ಸಮಯಕ್ಕೆ ಸರಿಯಾಗಿ ರಾಮಪುರ ಸೇರಿದೆವು. ಮನೆ ಮುಂದಿನ ಹೂತೋಟದಲ್ಲಿ ಭೀಮಮಾವನ ದರ್ಶನವಾಯ್ತು.

“ ಏನಯ್ಯಾ, ಬಂದೇಬಿಟ್ಟೆ ಅಂತೂ ನೆಹರೂ ಜೊತೆಗೆ ಒಬ್ಬ ಸೆಕ್ರೆಟರಿ ಇದ್ದೇ ಇರಬೇಕಲ್ವೆ ? ” ಅಂದರು.

“ ನಮಸ್ಕಾರ ಯಜಮಾನರಿಗೆ ” ಅಂದ ಶೌರಿ.

“ ಬಾ ಶೌರಿ ಏನು ಸಮಾಚಾರ ಪಟ್ಟಣದಲ್ಲಿ ? ”

“ ಸಂತೇಪೇಟೇಲಿ ಒಂದು ಲಾರಿಗೂ ಸೈಕಲ್ಲಿಗೂ ಡಿಕ್ಕಿಯಾಯ್ತು. ಸಿನಿಮಾ ಟಿಕೆಟ್ಟಿನ ಗಲಾಟೇಲಿ ಇಬ್ಬರು ಉಸಿರು ಸಿಕ್ಕಿ ಸತ್ತರು. ನಿನ್ನೆ ರಾತ್ರಿ ನಿಷದ್ ಬಾಗಿನಲ್ಲಿ

ಹತ್ತೊಂಬತ್ತು ಹೂವಿನ ಕುಂಡಗಳನ್ನು ಹಾರಿಸಿದ್ದಾರೆ. ಚಾಮುಂಡೇಶ್ವರಿ ವಾಲೀ ಬಾಲು ಪಂದ್ಯಗಳಲ್ಲಿ ಶಿವರಾಮಪೇಟೆಯು...."

"ಶೌರಿ-ಭೀಮರಾಯರು ಮನೆ ಹೊಕ್ಕ ಸುಮಾರು ಸಮಯವಾಯ್ತು" ಅಂದೆ.

ಶೌರಿಯ ಸಮಾಚಾರ ದರ್ಶನ ಮುಗಿಯಿತು.

"ಲೇ ನಿನ್ನ ಪ್ರೀತಿಯ ಅಳಿಯ ಬಂದಿದ್ದಾನೆ ನೋಡೇ" ಅನ್ನುತ್ತಾ ಭೀಮ ಮಾವ ಮನೆಯ ಹಾಲಿನಲ್ಲಿ ಕೂಗು ಹಾಕಿದರು. ನಾಗತ್ತೆ ಒಳಗಿಂದ ಒಂದು ಮಗಚುವಗೈ ಹಿಡಿದುಕೊಂಡಿದ್ದವರು-ಹಾಗೇ ಹೊರಗೆ ಬಂದರು.

"ಅಂತೂ ದೊಡ್ಡ ಮನಸ್ಸು ಮಾಡಿ ನಮ್ಮ ಮನೆಗೆ-ನಮ್ಮ ಹಳ್ಳಿಯ ಮನೆಗೆ ಬಂದೇ ಬಿಟ್ಟೆಯಲ್ಲಾ!" ಅಂತ ಕೊಂಕು ಹಾಕಿದರು.

ಸದ್ದು ಮಾಡದೆ ಕತ್ತಿನ ಕಸರತ್ತಿನಲ್ಲಿಯೇ ಉತ್ತರ ಕೊಟ್ಟೆ.

"ಪಾಂಡು ನಿನ್ನ ಮೂಕ ಅಭಿನಯ ನೋಡೋಕೆ ಇಲ್ಲಿಯವರಿಗೆ ನಿನ್ನ ಬರಮಾಡಿಕೊಳ್ಳಲಿಲ್ಲ. ಇದೇ ಸಂಜೆ ಡಾಕ್ಟರು ಭುಜಂಗರಾಯರು ಬರ್ತಾರೆ. ಇಲ್ಲೇ ಉಳೀತಾರೆ. ಮುಂದಿನ ವಾರ ತಮ್ಮ ಕುಟುಂಬಾನೆಲ್ಲಾ ಕರ್ಕೊಂಡು ಬರ್ತಾರೆ. ಈಸಲವಾದರೂ ನಿನ್ನ ಹುಚ್ಚುತನ ಬಿಟ್ಟು ಗಂಭೀರವಾಗಿ ನಡಕೋ" ಅನ್ನುತ್ತಾ ಮಗಚುವಗೈ ವರಸುತ್ತಾ ಒಳಹೊಕ್ಕರು.

ನಾಗತ್ತೆ ಹೆಚ್ಚು ಮಾತಿನವರಲ್ಲ. ಎಷ್ಟೋ ಅಷ್ಟು, ಏನೋ-ಅದು. ನಾನೇನು ಉತ್ತರ ಕೊಡಲಿಲ್ಲ. ಕೃಷೇವ್ ಅವರ ಸವಾಲಿಗೆ ಕೆನ್ನೆಡಿಯವರು ಯೋಚಿಸುವಂತೆ ನಾನೂ ಯೋಚಿಸುತ್ತ, ಊಟ ಮುಗಿಸಿ ಮನೆಯ ಮುಂದಿನ ತೋಪಿಗೆ ನುಗ್ಗಿ ಒಂದು ಮಾವಿನ ಮರದ ಅಡಿ ಸಿಗರೇಟು ಎಳೆಯುತ್ತ ಕುಳಿತೆ. ತಲೆಗೆ ಸರಿಯಾಗಿ ಗುರಿಯಿಟ್ಟ ಹಾಗೆ ಒಂದು ಮಾವಿನಕಾಯಿ ಬಿತ್ತು.

"ಓಹೋ ಪಾಂಡು-ನಾಗತ್ತೆ ನಿನ್ನೇ ಎದುರು ನೋಡ್ತಾ ಇದ್ಲು ಯಾವಾಗ ಬಂದಿ?"

—ಅನ್ನುತ್ತಾ ಮರದ ಮೇಲಿಂದ ಹುಣಸೂರು ಶೀನಿ ಇಳಿದು ಬಂದ.

"ಓಹೋ! ಶನೇಶ್ವರನ ಕಾಟ ಎಲ್ಲೂ ತಪ್ಪಿಲ್ಲ" ಅಂದೆ.

"ಪಾಂಡು-ಹಿಂದಿನದೆಲ್ಲಾ ಮರೆತುಬಿಡಬೇಕು. ಈಗ ನೀನು ದೊಡ್ಡ ಡಾಕ್ಟರ ಅಳಿಯನಾಗುತ್ತಿ-ರ್ಯಾಸ್ಕಲ್! ನಾನು ನಿನ್ನೆ ಬಂದೆ. ಅಪ್ಪ ನಾಳೆ ಬರ್ತಾರೆ. ಇವತ್ತು ಬೆಳಿಗ್ಗೆ ಭೀಮಮಾವ ಸ್ನಾನ ಮಾಡುವಾಗ ನಾನು ಬಚ್ಚಲ ಮನೆಗೆ ನುಗ್ಗಿದ್ದಕ್ಕೆ

ಅವರು ಒಂದು ಕೊಳ್ಳಿ ಹಿಡಿದು ನನ್ನನ್ನ ಅಟ್ಟಿಸಿಕೊಂಡು ಬಂದಿದ್ದರು. ಅದಕ್ಕಾಗಿ ಈ ಮರದ ಮೇಲೇ ಕುಳಿತಿದ್ದೆ" ಅಂದ.

ಭೀಮಮಾವನ ಮನೆ, ಸದ್ಯಕ್ಕೆ ಸಂಯುಕ್ತ ರಾಷ್ಟ್ರಗಳ ಕೂಟ ಆಗುವ ಸಂಭವ ನೋಡಿ ನನಗೆ ದಿಕ್ಕು ತೋಚದಾಯಿತು.

ಸಿನಿಮಾ ಮೊದಲ ಷೋಗೆ ಟಿಕೇಟು ಶುರು ಆಗುವ ಸಮಯ. ಏರೋಪ್ಲೇನು ಹಾರಿಸುತ್ತ ಒಂದು ಪಾಂಟಿಯಾಕ್ ಕಾರು ರಾಮಪುರದ ಮನೆಯ ಮುಂದೆ ಬಂದು ನಿಂತಿತು. ಶಿಶುಪಾಲ, ದಂತವಕ್ರರ ಹಾಗೆ ಡಾ|| ಭುಜಂಗರಾಯರು, ಡಾ|| ಬಾಳಾಜಿ ಕಾರಿಂದ ಇಳಿದರು. ಭೀಮಮಾವ, ನಾಗತ್ತೆ, ಶೀನಿ, ನಾನು, ಶೌರಿ, ಕೆಂಪ, ತಿಮ್ಮ, ಅಡುಗೆ ಅಚ್ಚಮ್ಮ, ನಿಂಗಿ, ಟಾಮಿ, ರೂಬಿ, ಜೋಬ್ ಎಲ್ಲರೂ ಸೇರಿ ಅವರಿಬ್ಬರನ್ನೂ ಸ್ವಾಗತಿಸಿದೆವು.

"ಓಹೋ, ಪಾಂಡು ಹೇಗಿದ್ದೀಯಪ್ಪ?" ಅಂದ ಬಾಳಾಜಿ.

"ಪರವಾಗಿಲ್ಲ" ಅಂತ ಅಂದೆ-ಅಂತ ಕಾಣುತ್ತೆ.

ರಾಮಪುರದ ಮನೆ ಹಳೆಯದಾದರೂ ಬೃಹತ್ ಕಟ್ಟಡ. ಭೀಮಮಾವನ ಅಜ್ಜ ಅದನ್ನು ಕಟ್ಟಿಸಿದಾಗ ಪ್ರಾಯಶಃ ನಾಲ್ಕಾರು ಛತ್ರಗಳ ನಕ್ಷೆಗಳನ್ನು ತರಿಸಿ ಯಾವುದನ್ನೂ ಬಿಡಲು ಮನಸ್ಸಿಲ್ಲದೆ ಎಲ್ಲವನ್ನೂ ಸೇರಿಸಿ ಈ ಮನೆ ಕಟ್ಟಿಸಿರಬಹುದು. ಅಥವಾ ಇಡೀ ಸಂಸ್ಥಾನದಲ್ಲಿ ಪ್ರಳಯ ಬಂದರೆ ಆಗ ಸಂಸ್ಥಾನದ ಜನರನ್ನೆಲ್ಲಾ ಸುರಕ್ಷಿತವಾಗಿ ಒಂದು ಕಡೆ ಕೂಡಿ ಹಾಕಬಹುದು ಅಂತ ಆ ಬೃಹತ್‌ಕಟ್ಟಡ ಕಟ್ಟಿಸಿರಬಹುದು. ಮೂರು ನಾಲ್ಕು ದೊಡ್ಡ ಮನೆಗಳನ್ನ ಒಂದರ ಮೇಲೊಂದು ಪೇರಿಸಿದ ಹಾಗಿದೆ. ನನಗೆ ಶೀನಿಗೆ ಮೊದಲ ಮಹಡಿಯ ಮೇಲೆ ಕೋಣೆಗಳು ತಯಾರಾಗಿದ್ದವು. ಡಾ|| ಭುಜಂಗರಾಯರು ಮತ್ತು ಡಾ|| ಬಾಳಾಜಿಗೆ ಎರಡನೆಯ ಅಂತಸ್ತಿನಲ್ಲಿದ್ದ ಕೋಣೆಗಳು ತಯಾರಾದವು. ಊಟ ಮುಗಿಸಿ, ಹರಟೆ ಹೊಡೆದು ನಮ್ಮ ಕೋಣೆಗಳನ್ನು ಸೇರಿ ಎಷ್ಟೋ ಹೊತ್ತಾದರೂ ನನಗೆ ಮಾತ್ರ ನಿದ್ರೆ ಹತ್ತಲಿಲ್ಲ. ಪಕ್ಕದ ಕೋಣೆಯಲ್ಲಿದ್ದ ಶೀನಿ ಆಗಲೇ ಗೊರಕೆ ಹೊಡೆಯಲು ಶುರು ಮಾಡಿದ್ದ ಆ ಶಬ್ದ ಬೇರೆ ನನ್ನ ನರಗಳನ್ನೆಲ್ಲಾ ಕೆರಳಿಸಿತ್ತು.

"ಥತ್! ಶನಿ!" ಅಂದೆ.

"ಸರ್" ಅನ್ನುತ್ತಾ ಶೌರಿ ಬಂದ.

"ಎಲ್ಲಿದ್ದೆ ಶೌರಿ?"

"ಇಲ್ಲೇ ವರಾಂಡದಲ್ಲಿದ್ದೆ ಸರ್. ಕೂಗಿದ ಹಾಗಾಯ್ತು"

" ಇಲ್ಲ-ನಿನ್ನಲ್ಲ ಶೌರಿ ಕೂಗಿದ್ದು ನೀ ಹೋಗು....ಹಾ ನಿಲ್ಲು ಶೌರಿ, ಆ ಶನಿ ಶೀನಿ ಇವತ್ತು ಅವನಿಗೆ ಬುದ್ಧಿ ಕಲಿಸಲೇಬೇಕು ಶೌರಿ"

" ಸರ್...."

" ಶೀನಿ ಇಲ್ಲೇ ಪಕ್ಕದ ಕೋಣೇಲಿ ಗೊರಕೆ ಹೊಡೀತಾ ನನ್ನ ಪೀಡಿಸ್ತಾ ಇದ್ದಾನೆ ಹಿಂದೆ ನಮ್ಮ ಸಂಘದಲ್ಲಿ ನನ್ನನ್ನ ಸೂಟು ಸಮೇತ ನೀರಿನಲ್ಲಿ ಬೀಳಿಸಿದ್ದ ಈಗ ಈ ಕ್ಷಣ ಅದಕ್ಕೆ ಸೇಡು ತೀರಿಸ್ಕೊತೀವೆ"

" ಹೇಗೆ ಸರ್ ?"

" ಒಂದು ಕೋಲು ಅದರ ಒಂದು ಕೊನೆಗೆ ಚೂಪಾದ ದಬ್ಬಳ ಕಟ್ಟಿ ತೆಗೆದು ಕೊಂಡು ಬಾ ತೋರಿಸ್ತೇನೆ"

" ಆದರೆ ಸರ್...."

" ಆದರೆ ಗೀದರೆ ಏನೂ ಇಲ್ಲ ಶೌರಿ ಒಂದು ಕೋಲು, ದಬ್ಬಳ ಈ ಕ್ಷಣ ಬರಲಿ"

" ಆಗಲಿ ಸರ್"

ರಾತ್ರಿ ಸುಮಾರು ಸಂಪೂರ್ಣರಾಮಾಯಣ ನಾಟಕದಲ್ಲಿ ಮಾರೀಚ ಕಾಣಿಸಿ ಕೊಳ್ಳುವ ಸಮಯ-ನಾನು ಕೋಲು ಹಿಡಿದು ನನ್ನ ಕೋಣೆಯಿಂದ ಹೊರಬಿದ್ದೆ. ಪಕ್ಕದ ಕೋಣೆಯಿಂದ ಗೊರಕೆ ತಥಾರೀತಿ ಬರುತ್ತಿತ್ತು. ಕೋಣೆಯ ಕಿಟಕಿಯ ಬಳಿ ನಿಂತು, ಗೊರಕೆಯ ಶಬ್ದದಿಂದ ಶೀನಿಯ ಕಳೇಬರ ಬಿದ್ದಿರುವ ಸ್ಥಳ ಊಹಿಸಿ ದಬ್ಬಳ ಮುಂದು ಮಾಡಿ ಕೋಲನ್ನು ಬಲವಾಗಿ ನೂಕಿದೆ. ಕೂಡಲೇ ಪ್ರತಿಫಲ ದೊರಕಿತು. ದಬ್ಬಳದ ತುದಿಯಿಂದ ಭಯಂಕರ ಚೀತ್ಕಾರ ಕೇಳಿಬಂತು. ಇಡೀ ಮನೆಯೇ ನಡುಗಿತು.

ತಕ್ಷಣ ನನ್ನ ಮೈಯ ರಕ್ತ ಹೆಪ್ಪುಕಟ್ಟಿದ ಹಾಗಾಯ್ತು. ಏಕೆಂದರೆ ಆ ಚೀತ್ಕಾರ ಸಾಧಾರಣ ಗಂಟಲಿನವರದಲ್ಲ. ಶೀನಿಯದಂತೂ ಅಲ್ಲವೆಂದು ಗೊತ್ತಾಯ್ತು. ನನ್ನ ಪರಿಸ್ಥಿತಿ ಹೇಗಿತ್ತು ಅಂದರೆ ಪ್ರಾಯಶಃ ಸ್ಟಾಲಿನ್ ಶವ ಸಾಗಿಸುವಾಗ ಅದು ಇದ್ದಕ್ಕಿದ್ದ ಹಾಗೆ ಎದ್ದು ಕೂತಿದ್ದರೆ ಕೃಷೇವ್‌ಗೆ ಹೇಗಾಗುತ್ತಿತ್ತೋ ಹಾಗಿತ್ತು. ನನ್ನ ಕೋಣೆಗೆ ಸೇರಿಕೊಳ್ಳಲು ಹಿಂತಿರುಗಿದೆ. ಕತ್ತಲಲ್ಲಿ ಯಾರೋ ನನ್ನ ಮೈಗೆ ಎಡವಿದರು. ಇಬ್ಬರೂ ಬಿದ್ದೆವು.

" ಪೆಟ್ಟಾಯ್ತೇ ಸರ್"

" ಶೌರಿ !"

" ಹೌದು ಸರ್"

" ಶೌರಿ-ಈ ಕೋಣೇಲಿ ಯಾರು ಮಲಗಿದ್ದರು....ನಾನು ಶೀನಿ ಅಂತ....?

" ನಾನು!!" ಅನ್ನುತ್ತಾ ಅದೇ ಸಮಯಕ್ಕೆ 1000 ಕ್ಯಾಂಡಲ್ ಪವರಿನ ಟಾರ್ಚನ್ನು ನಮ್ಮಿಬ್ಬರ ಮೇಲೆ ಬಿಡುತ್ತಾ ಡಾ|| ಭುಜಂಗರಾಯರು, ನನ್ನ ದಬ್ಬಳದ ಕೋಲನ್ನೂ ಹಿಡಿದು ನಿಂತಿದ್ದರು. ಟಾರ್ಚನ್ನು ಸರಿಯಾಗಿ ನನ್ನ ಮುಖಕ್ಕೆ ಹಿಡಿದು–" ಭಗವಂತಾ!! ಕ್ಲೆಪ್ಟೋಮೇನಿಯಕ್ and ಸೋಮ್ನಾಂಬುಲಿಸ್ಟ್!! ಅಂತ ಅರಚಿದರು.

" ಕ್ಷಮಿಸಿ ಸರ್ ಈ ಕೋಣೇಲಿ ನನ್ನ ಸ್ನೇಹಿತ ಶೀನಿ ಮಲಗಿದ್ದಾನೆ ಅಂತ ನೆನೆಸಿದ್ದೆ" ಅಂದೆ.

" ಶೀನಿ Nonsense! ನಾನೂ ಶ್ರೀನಿವಾಸರಾವ್ ಕೋಣೆ ಬದಲಾಯಿಸಿದ್ದು ನಿಮಗೆ ಗೊತ್ತಿಲ್ವೆ? ನಿಮ್ಮ ಶೌರಿಯೇ ನನ್ನ ಸಾಮಾನು ಇಲ್ಲಿ ತಂದು ಹಾಕಿದ!"

" ಹೌದು ಸರ್ ಡಾಕ್ಟರಿಗೆ ಎರಡನೇ ಅಂತಸ್ತಿನಲ್ಲಿ ಮಲಗುಕ್ಕೆ ಭಯ ಅಂದರು ಆದ್ದರಿಂದ, ಈ ಕೋಣೆಗೆ ಇಳಿದು ಬಂದರು"

" Nonsense!? ಅನ್ನುತ್ತಾ ಡಾಕ್ಟರು ತಮ್ಮ ಕೋಣೆಗೆ ಹೊರಟು ಹೋದರು. ಜೊತೆಗೆ ನನ್ನ ಆಯುಧವನ್ನು ತೆಗೆದುಕೊಂಡು ಹೋದರು.

" ಶೌರಿ...."

" ಸರ್-ಇನ್ನು ಇಲ್ಲಿ ಉಳಿಯೋದರಿಂದ ಸುಖವಿಲ್ಲ ಸರ್. ಮನೆಯವರು ಏಳುವುದರೊಳಗಾಗಿ ಹೊರಡೋದು ವಾಸಿ. ಮೊದಲ ಬಸ್ಸು ಮೈಸೂರ ಕಡೆ ಕೋಳಿ ಕೂಗುತ್ತಲೂ ಹೊರಡುತ್ತೆ. ನಾನು ನಿಧಾನವಾಗಿ ಸಾಮಾನುಗಳನ್ನ ಕಾರಲ್ಲಿ ತರ್ತೇನೆ...."

" ಆದರೆ....ಶೌರಿ...."

" ನಿನ್ನೆ ರಾತ್ರಿ ನಿಮ್ಮ ನಾಗಮ್ಮನವರು, ಡಾಕ್ಟರ್ ಬಾಳಾಜಿ ಬಹಳ ಹೊತ್ತು ಮಾತಾಡ್ತಾ ಇದ್ದರು ಸರ್. ಏನಾದರೂ ಮಾಡಿ ಈ ಸಾರಿ ನಿಮಗೆ ಬೇಡಿ ಹಾಕ್ಲೇ ಬೇಕು ಅಂತ ನಿರ್ಧರಿಸಿದ್ದಾರೆ ಸರ್"

" ಶೌರಿ ಹಾಗಾದ್ರೆ ಅದಕ್ಕೇ ನೀನು ನನಗೆ ಶೀನಿ ಕೋಣೆ ಬದಲಾಯಿಸಿದ್ದು ಹೇಳಲಿಲ್ವೆ?"

" ಹೌದು ಸರ್-ಅದು ಹೀಗಾಗುತ್ತೆ ಅಂತ ತಿಳಿದಿದ್ದೆ ಸರ್. ನೀವು ಬಸ್ ಸ್ಟಾಂಡಿಗೆ ಹೊರಟರೆ...."

" ನಾಗತ್ತೆ?"

"ನಾನು ನಿಭಾಯಿಸಿಕೊಂಡು ಬರ್ತೀನೆ ಸರ್. ಅರ್ಧರಾತ್ರೀಲಿ ಡಾಕ್ಟರ್ ಭುಜಂಗರಾಯರಿಗೆ ಪಿತ್ಥ ಕೆರಳಿ ನಿಮ್ಮ ಕೋಣೆಗೆ ನುಗ್ಗಿದರು, ನೀವು ಹೆದರಿ ಮೈಸೂರಿಗೆ ಕಂಬೀ ಕಿತ್ತಿರಬಹುದು ಅಂತ ಗುಟ್ಟಿನಲ್ಲಿ ಹೇಳ್ತೀನೆ ಸರ್-ಭೀಮರಾಯರು ಖಂಡಿತ ನಂಬುತ್ತಾರೆ ಸರ್"

"ಸರಿ ಶೌರಿ, ನನ್ನ ಮಫ್ಲರ್ ಕೊಡು" ಅಂದೆ.

—"ಕೇಫ"

"ಇದೇನೇ! ಕಾಗಕ್ಕ, ಎಂದೂ ಇಲ್ಲದ್ದು ಇವತ್ತು ಬೆಳಿಗ್ಗೆ-ಚುನಾವಣೆಗೆ ಬಂದ್ಬಿಟ್ಟಿದೀ" ಅಂತ ಗುಬ್ಬಕ್ಕ ಕೊಕ್ಕು ಕೊಂಕಿಸಿ ಕೇಳಿದಳು.

"ನಮ್ಮ ದೇಶ, ನಮ್ಮ ಸರ್ಕಾರ, ಗೂಡಿರೋ ಮರಗಳನ್ನು ಕಾಪಾಡೋಕ್ಕೆ ನಮ್ಮ ಮುಖಂಡರನ್ನ ಆರಿಸದೆ ಇದ್ದರೆ ಹೇಗಮ್ಮಾ! ಮೊದಲು ಮೊದಲು ಮತ ನೀಡುಕ್ಕೆ ಬರಲಿಲ್ಲ. ದಿಟ! ಆದರೆ ಈಗ ತಿಳಿವಳಿಕೆ ಮೂಡಿದೆ ಗುಬ್ಬಕ್ಕ! ಅದಕ್ಕೇ ಬಂದೆ. ಎಷ್ಟೇ ಹೊತ್ತಾಗಲಿ ಕಾದಿದ್ದು ಮತ ನೀಡೇ ಹೋಗ್ತೀನಿ. ಅದಕ್ಕೇನೆ ಹೂ ಬತ್ತಿಮಾಡುಕ್ಕೆ ಅಂತ ಹತ್ತಿ ತಂದಿದೀನಿ"

"ಅಂದ ಹಾಗೇ ಕಾಗಕ್ಕ, ನಿಮ್ಮ ಮನೆ ಮುಂದೆ ನಿನ್ನೆ ಜಟ್ಕಾ ನಿಂತಿತ್ತು, ಯಾರಾದರೂ ಮನೆಗೆ ಬಂದಿದ್ದಾರೇನೇ! ನೆಂಟರು ಇಷ್ಟರು?" ಎಂದಳು ಗುಬ್ಬಕ್ಕ.

"ನೆಂಟರು ಬಂದಿದ್ದಾರಮ್ಮ! ಇವರ ತಾಯಿ! ಇಷ್ಟರು ಅಂತ ಹ್ಯಾಗೆ ಹೇಳ್ಲಮ್ಮಾ" ಎಂದಳು ಕಾಗಕ್ಕ, ಸ್ವಲ್ಪ ಮರುಕದ ದನಿಯಲ್ಲಿ.

ಎರಡು ನಿಮಿಷ ಯಾರೂ ಮಾತಾಡಲಿಲ್ಲ.

ಕಾಗಕ್ಕ ಆಮೇಲೆ "ಗುಬ್ಬಕ್ಕಾ ನಾನನಕ ಚುನಾವಣೆಗೆ ಅಂತ ನೆಪ ಹೇಳಿ ಗೂಡುಬಿಟ್ಟು ಬರಬೇಕಾಯ್ತು! ನೀನ್ಯಾಕೆ ಬಂದೆಯೆ ನಿನಗೆ ಅತ್ತೆ ಇಲ್ವಲ್ಲೇ?" ಎಂದು ಕೇಳಿದಳು.

"ಅತ್ತೆ ಇಲ್ಲದೆ ಇದ್ದರೆ ಏನಾಯ್ತೆ? ಅತ್ತಿಗೆ ನಾದಿನೀರು ಇಧಾರಲ್ಲೇ ಅವರು ಬಂದಿದಾರೆ ಕಣೆ! ಆದಕ್ಕೇ ನಾನು ಮತ ಹಾಕುಕ್ಕೆ ಅಂತ ಬಂದೆ ಎಂದು ಗುಬ್ಬಕ್ಕ ಅಳ್ತಾ ಹೇಳಿದಳಂತೆ.

‘ಅಷ್ಟಗ್ರಹ’ ಗಾದೆಗಳು ಮತ್ತು ಇತರೆ

ಹೋಮ ಮಾಡಿ ಶಾಸ್ತ್ರಿಗಳೇ ಅಂದ್ರೆ
ರೋಮಕ್ಕೊಂದು ರೂಪಾಯಿ ಅನ್ನೋದೇ?
ನೋಟು ಸುಟ್ರೆ ಸ್ವರ್ಗದ ಗೇಟು ಸಿಕ್ಕೀತೆ.
ಅಷ್ಟಗ್ರಹ ಬೈದೋನು ಆಂಜನೇಯ ಗುಡೀಲಿ ಹೋಮದ ಹೊಗೆ ಕುಡಿದ್ನಂತೆ.
ಶಾಂತಿ ಮಾಡ್ಕೊಂಡ್ರೆ ಭ್ರಾಂತಿ ಹೋದೀತೇ?
ಬೂಸಲು ತುಪ್ಪ ದಾನ ಮಾಡಿ ಸಾಸಿರ ಪುಣ್ಯ ಕೇಳಿದ್ರಂತೇ.
ತೆಂಗಿನಕಾಯಿ ಬೆಲೆ ಕೇಳಿದ ತಂಗಮ್ನೋರು ಮಂಗಮ್ಮನ ಹಾಗೆ ಹಾರಾಡ್ತಿದ್ರಂತೆ.
ಅಷ್ಟಗ್ರಹಗಳು ಗುಂಡಗೆ ಸುತ್ತುತ್ತಿದ್ರೆ ನವಗ್ರಹದ ಸಾಮಾನುಬೆಲೆ ನೆಟ್ಟಗೆ ಏರಿತು.
ಅಷ್ಟಗ್ರಹಕ್ಕೆ ಹೆದರಿ ಅಟ್ಟ ಏರಿದ್ನಂತೆ.
ಅದೂ ಇದೂ ಭಯ ಹುಟ್ಸಿ ಜ್ಯೋತಿಷ್ಕ ಅದಾಯಕ್ಕೆ ಹಾದಿಮಾಡ್ಕೊಂಡ್ನಂತೆ.
ಅಷ್ಟಗ್ರಹ ಕಾಟ ಹೇಗಾದ್ರೂ ಇರ್ಲಿ ಆಚಾರ್ರ ಗೃಹ ತುಂಬಿತು.
ಡಬ್ಬ ಮುಗ್ಗಲು ತುಪ್ಪ ಸುರಿದಿದ್ದಕ್ಕೆ ಅಬ್ಬ! ಅನ್ಕೊಂಡು ಓಡಿಹೋದ್ವು ಅಷ್ಟಗ್ರಹಗಳು.
ಅನಿಷ್ಟಕ್ಕೆಲ್ಲಾ ಅಷ್ಟಗ್ರಹ ಗುರಿ.
ದುಷ್ಟರಿಗೆ ಅಷ್ಟಗ್ರಹವೇ ಅಪರ್ಚುನಿಟಿ
ಹಲವರಿಗೆ ಅಷ್ಟಗ್ರಹದ ಭಯ, ಕೆಲವರಿಗೆ ಇಷ್ಟಗ್ರಹ ಸಮಯ.
ಮದುವೇ ಆಗೋ ಅಚ್ಯುತ ಅಂದ್ರೆ ಅಷ್ಟಗ್ರಹ ಕಳೀಲಿ ಅಂದ್ನಂತೆ.
ಪಂಚಾಂಗದಿಂದ ಪಂಚೆ ದಾನ ಸಿಕ್ತು.
ಪಂಚಾಂಗ ಮುಳುಗಿದ್ರೆ ಪ್ರಪಂಚ ಮುಳುಗುತ್ತೇ?
ಕುಂಡಕ್ಕೆ ಸೀರೆ ಎಸೆದು ಮೋರೆ ಕೆಂಡ ಮಾಡ್ಕೊಂಡ್ರಂತೆ.
ಕಂತೆ ನೋಟು ಸುಟ್ರೆ ಕಾಳಸಂತೆ ಪಾಪ ಹೋಗುತ್ತೇ?
ಏನೋ ಕೆಟ್ಟ ಇಷ್ಟೊಂದು ತಿಂತೀಯಾ ಅಂದ್ರೆ, ಹೇಗೂ ಪ್ರಳಯವಾಗುತ್ತೆ ಅಂದ್ನಂತೆ.

ಪ್ರಳಯ ಆಗದಿದ್ದುದನ್ನು ನೋಡಿ ಜ್ಯೋತಿಷ್ಕರು ಪಂಚಾಂಗವನ್ನು ನೀರಿನ ತೊಟ್ಟಿಯಲ್ಲಿ ಕಲ್ಲು ಕಟ್ಟಿ ಮುಳುಗಿಸಿ ಜಲಪ್ರಳಯಮಾಡಿಸಿದರಂತೆ. ಇನ್ನು ಕೆಲವರು ಅಗ್ನಿಪ್ರಳಯಮಾಡಿಸಿದರಂತೆ.

* * * *

ಆತ — ನೋಡೀ, ರಾಯ್ರೆ ನನಗಾಗಲೇ ಅಷ್ಟಗ್ರಹ ಪರಿಣಾಮ ವಿಪರೀತವಾಗಿದೆ.

ರಾಯ್ರು—ಏನಾಯ್ತು ಸ್ವಾಮಿ! ಏನಾಯ್ತು?

ಆತ — ಅಯ್ಯೋ! ಗೊತ್ತಿಲ್ವೇ! ನನ್ನ ಅಷ್ಟ ಅಳಿಯಂದಿರೂ ಅಷ್ಟಗ್ರಹಕ್ಕೆ ಹೆದರಿಕೊಂಡು ತಿಂಗಳಿಂದ ನನ್ನ ಮನೇಲಿ ಸಂಸಾರ ಸಮೇತ ಠಿಕಾಣಿ ಹಾಕಿದಾರೆ. ಈ ಅಷ್ಟಗ್ರಹಗಳಿಗೆ ಸ್ವಾಮಿ ನಾನು ಹೆದರ್ತಿರೋದು. ಆ ಅಷ್ಟಗ್ರಹಗಳು ಏನು ಮಾಡುತ್ವೆ?

—ಕೆ. ಅಮರನಾಥ್.

ಮಗಳಿಂದ ಬಂದ ಕಾಗದ

ಅಪ್ಪಾ!

ಮಲಗಿದ್ದ ಕಡೇನೇ ಅತ್ತೆ ಮಾವ ಇವರು ಎಲ್ಲ ಬಂದು, ಉಪಚಾರ ಮಾಡ್ತಾರೆ. ಹಾಲು ಅನ್ನ ಕಲಸಿ ತುತ್ತು ಹಾಕ್ತಾರೆ. ಏಳಬೇಡಮ್ಮಾ ಮಲಗೇ ಇರು ಅಂತ ಬೂಚಿ ಬೂಚಿ ಮಾಡ್ತಾರೆ, ಸಿನಿಮಾ ಪತ್ರಿಕೆಗಳನ್ನು ತಂದುಕೊಡ್ತಾರೆ, ಅತ್ತೆಮ್ಮನೋರು ಹತ್ತಿರ ಕೂತುಕೊಂಡು ಅಡುಗೂಲಜ್ಜಿಕತೆ ಹೇಳ್ತಾರೆ. ನಿಮ್ಮ ಅಳಿಯಂದಿರು ಕಿತ್ತಳೆಹಣ್ಣು ಸುಲಿದು, ಬೀಜ ಬಿಡಿಸಿ ಕುಸುಮಾನೇ ತಿನ್ನಕ್ಕೆ ಕೊಡ್ತಾರೆ, ಬಲು ಚೆನ್ನಾಗಿ ನೋಡಿಕೋತಾ ಇದಾರೆ ಅಮ್ಮಂಗೆ ಹೇಳಿ

ನಿಮ್ಮ ಮಗಳು,
ಶಾರಿ.

ಮರೆತೆ. ಮೂರು ದಿನದಿಂದ ಬೆಳಿಗ್ಗೆ ಎದ್ದರೆ ವಾಕರಿಕೆ ಬರ್ತಾ ಇದೆ. ಯಾರೇನು ಕೊಟ್ಟರೂ ಬೇಡ ಅನ್ನಿಸುತ್ತೆ. ನಮ್ಮನೇಲಿ ಹೋದ ವರ್ಷದ ಮಾಗಳಿ ಬೇರು ಉಪ್ಪಿನಕಾಯಿತ್ತಲ್ಲ, ಒಂದು ಶೀಷೇಲಿ ಹಾಕಿ ಕಳಿಸುಕ್ಕೆ ಆಗುತ್ತ್ಯೇ!

ಶಾರಿ.

ಸಹ - ಬಾಳ್ವೆ

೧೮ ವರ್ಷದ ಹೆಣ್ಣು ಮಗಳು ಸೊಂಪಾಗಿ ಬೆಳೆದವಳು. ಮನೆಕೆಲಸವನ್ನೆಲ್ಲಾ ಮಾಡುತ್ತಾ ನಗುನಗುತ ಇದ್ದವಳು. ಇದ್ದಕ್ಕಿದ್ದ ಹಾಗೆ ಉಸಿರು ಹಿಡಿದುಕೊಂಡಿತು ಎಂದು ಬೆಳಗಿನ ಝಾಮು ೩ ಗಂಟೆಗೆ ಬೊಬ್ಬೆಹಾಕಿದಳು. ಬಿಸಿನೀರು ಶಾಖ ಕೊಟ್ಟು ನೋಡಿದಳು ಅವಳ ತಾಯಿ. ಹುಣಿಸೆರಸದ ಪಟ್ಟುಹಾಕಿದಳು. ನೋವು ಕಡಿಮೆ ಆಗಲೇ ಇಲ್ಲ. ಕಡೆಗೆ ಗಂಡನನ್ನು ಎಬ್ಬಿಸಿದಳು.

ಕಾತುರನಾಗಿ ಗಂಡ ಎದ್ದು ಬಂದ. ಮಗಳನ್ನು ನೋಡಿದ. ಎಷ್ಟು ಹೊತ್ತಿಗೆ ಶುರುವಾಯ್ತು ಶೂಲಿ ಎಂದು ಕೇಳಿದ. ಮೂರು ಗಂಟೆಗೆ ಶುರುವಾಯ್ತು ಅಂತ ನರಳ್ತಾ ಮಗಳು ಹೇಳಿದಳು. ಶೂಲಿ ಬಂದಾಗ ಎಚ್ಚರಾಯ್ತು. ಆಗತಾನೆ ಪೋಲೀಸ್ ಠಾಣೇಲಿ ಮೂರು ಬಾರಿಸಿದ; ಅಯ್ಯೋ ಎಂದು ಹೊಟ್ಟೆಯ ಪಕ್ಕಾನ ಹಿಡಕೊಂಡಳು.

ತಂದೆ ಕವಡೆ ಹಾಕಿನೋಡಿದ. ಉಚ್ಛಿಷ್ಟ ಗಣಪತಿ ಉಪಾಸಕ ಅವ. ಮಂತ್ರ ಯಂತ್ರದಲ್ಲಿ ಹೊಗೋಬೇನೆ ಅಲ್ಲ ಅಂತ ತಿಳೀತು. ಉತ್ತರ ದಿಕ್ಕಿನಾಗೆ ಹೋಗಿ ಮದ್ದು ತಂದುಕೊಟ್ಟರೆ ವಾಸಿಯಾಗುತ್ತೆ ಎಂದೂ ತಿಳೀತು.

ಉತ್ತರದಿಕ್ಕಿನ ಕಡೆಗೆ ಮನೆಬಿಟ್ಟು ಹೊರಟರೆ ಒಂದು ಸರ್ವೆ ತೋಪು ಆದ ರಾಚೆ ಸ್ಮಶಾನ ಇಷ್ಟೇ ಇರೋದು. ಊರಿನ ಉತ್ತರದ ತುದಿಯಲ್ಲೇ ಉಪಾಸಕ ಮನೆ ಕೊಂಡಿದ್ದದ್ದು. ಆ ದಿಕ್ಕಿನಲ್ಲಿ ವಿಶ್ರಾಂತಿಪಡೆದ ಹಿರಿಯ ನ್ಯಾಯಾಧೀಶರೊಬ್ಬರು ದೊಡ್ಡ ತರಕಾರಿತೋಟ ಮಾಡಿಕೊಂಡು ಪುಟ್ಟ ಬಂಗಲೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರು. ಅವರನ್ನು ಬಿಟ್ಟರೆ ಇನ್ನಾವ ನರಪ್ರಾಣಿಯೂ ಅಲ್ಲಿರಲಿಲ್ಲ. ಮತ್ತೆ ಉತ್ತರ ದಿಕ್ಕಿನಿಂದ ಏನು ಮದ್ದು ತರೋದು ?

ಅಷ್ಟು ಹೊತ್ತಿಗೆ ರೋಗಿಯ ತಾಯಿ ಹೇಳಿದಳು. ನೀವು ಏನು ಬೇಕಾದರೂ ಮಾಡಿ. ನಾನು ಹೋಗಿ ಸ್ನಾನಮಾಡಿ ಮಡೀಲಿ ಮುಡುಪು ಕಟ್ಟಿಡತೀನಿ ಅಂತ. ಹೊರಟೂಹೋದಳು. ಉಪಾಸಕರೇ ಬಿಸಿನೀರಶಾಖ ಕೊಡುಕ್ಕೆ ಕೂತರು.

ಬೆಳಗಾಯಿತು. ರೋಗೀಗೆ ಸ್ವಲ್ಪ ಝೊಂಪು ಹತ್ತಿದ ಹಾಗಾಯ್ತು. ಉಪಾಸಕರು ಯೋಚನೆಮಾಡ್ತಾ ಬೀದಿಬಾಗಿಲನ್ನು ತೆರೆದರು. ಹೊರಕ್ಕೆ ಬಂದರು.

ತರಕಾರಿ ಬುಟ್ಟಿಯನ್ನು ಹೊತ್ತು ಒಬ್ಬ ದಕ್ಷಿಣದಕಡೆಗೆ ಹೋಗುತ್ತಿದ್ದ. ನ್ಯಾಯಾಧೀಶರ ಮನೆ ಆಳು ಅಂತ ಉಪಾಸಕರಿಗೆ ಗೊತ್ತಿತ್ತು. ಆಳುಕೂಡ ಶರಣು

ಅಯ್ನೋರ ಅಂದ. ಮರು ಶರಣು ಹೇಳಿದ ಉಪಾಸಕರ ಮುಖನೋಡಿ ತರಕಾರಿ ಬುಟ್ಟಿಯ ಆಳಿಗೆ ಅಯ್ನೋ ಅನ್ನಿಸಿರಬೇಕು. "ಯಾಕೆ? ಅಯ್ನೋರ ಯೋಚನೇಲಿ ಬಿದ್ದ ಹಾಗಿದೆ?" ಎಂದು ಕೇಳಿದ. ಮಗಳು ಬೇನೆಬಿದ್ದಿದ್ದನ್ನೂ ಕವಡೆಶಾಸ್ತ್ರದ ಫಲಿತಾಂಶವನ್ನೂ ಉಪಾಸಕರು ಹೇಳಿದರು.

"ಶಾಸ್ತ್ರ ಎಂದಾರ ಸುಳ್ಳಾಗ್ತದಾ? ಅಯ್ನೋರ! ನಮ್ಮ ಧನಿಗಳು ಕೂಡ ಮದ್ದುಮಾಡ್ತಾರೆ. ಊರೂರಿಂದ ಮಂದಿ ಬಂದು ಮದ್ದು ತೊಗೊಂಡು ಹೋಗ್ತಾರೆ. ಅದೆಂತದೊ ರವೆತರಹ ಗುಳಿಗೆಗಳನ್ನು ಕೊಡ್ತಾರೆ. ನೀವು ಹೋಗಿ ಕೇಳಿ ಅಂದ. ಉಪಾಸಕರ ಮುಖ ಪ್ರಸನ್ನವಾಯ್ತು. ಇದ್ದಹಾಗೇ ನಿವೃತ್ತ ನ್ಯಾಯಾಧೀಶರ ಬಂಗಲೆಕಡೆಗೆ ಹೋದರು.

ಬಂಗಲೆ ಬಾಗಲಲ್ಲೇ ನ್ಯಾಯಾಧೀಶರು ಬುಟ್ಟಿಗಳಿಗೆ ತರಕಾರಿ ತುಂಬಿಸುತ್ತ ಇದ್ದರು. ಉಪಾಸಕರು ನಮಸ್ಕಾರಮಾಡಿ ಬಂದ ವಿಷಯವನ್ನು ಹೇಳಿದರು. ನ್ಯಾಯಾಧೀಶರು ಮನೆಯೊಳಕ್ಕೆಹೋಗಿ ಆರು ಮಾತ್ರೆಗಳನ್ನು ತಂದು ಉಪಾಸಕರಿಗೆ ಕೊಡುತ್ತಾ. "ನಿಮ್ಮ ಮಗಳಿಗೆ ಉದರಶೂಲಿ ಬಂದಿದೆ. ವಯಸ್ಸುಬಂದ ಹೆಣ್ಣು ಮಕ್ಕಳಿಗೆ ಬರೋದು ಸಾಮಾನ್ಯ. ಕೆಟ್ವೆನ್ಸಿ ಒನ್ ಫಾಸ್ ಮಾತ್ರೆಗಳನ್ನು ಕೊಟ್ಟರೆ ವಾಸಿಯಾಗುತ್ತೆ. ಈ ಖಾಯಿಲೆಗೆ ಇಂಗ್ಲೀಷು ಡಾಕ್ಟರ ಹತ್ತಿರ ಹೋದರೆ ಮೂರು ಆಪರೇಷನ್ ನಾನ್ನೂರು ಇನ್ಜಕ್ಷನ್ನು ಕೊಟ್ಟು ಮೂರು ವರ್ಷ ಚಿಕಿತ್ಸೆ ಮಾಡ್ತಾರೆ. ನೀವು ಹೋಮಿಯೋಪತಿ ಔಷಧಕ್ಕೆ ಅಂತ ನನ್ನ ಹತ್ತಿರ ಬಂದಿದ್ದು, ನಿಮ್ಮ ಮಗಳ ಪುಣ್ಯ ಅಂದರು.

ಉಪಾಸಕರು ಮನೆಗೆ ಬಂದು ಆ ಮಾತ್ರೆಗಳನ್ನು ಪ್ರಯೋಗಿಸಿದರು. ಚೆಂಡು ಪುಟ ಹೊಡೆದಂತೆ ಹೆಣ್ಣು ಎದ್ದು ಕುಣಿದಾಡಿತು.

* * * *

ನ್ಯಾಯಾಧೀಶರ ಮನೆಯಲ್ಲಿ ಇದ್ದ ಮೂರೂ ನಾಯಿಗಳು ಲೊಳ್ ಲೊಳ್ ಅಂತ ಒಂದೇ ಸಮನೆ ಬೊಗಳುತ್ತಾ ಇತ್ತು. ಕಾರಣ ಇಷ್ಟೇ! ಮನೆ ಮೊದಲ ಮಗ ೧೨ ವರ್ಷದ ಬಾಲುವಿಗೆ ಗಂಟಲು ಬೇನೆ ಬಂದಿತ್ತು. ಉಸಿರಾಡುವಾಗ ಘರ್ ಘೇರ್ ಶಬ್ದಮಾಡ್ತಾ ಇದ್ದ. ಜತೇಲಿ ಆಡ್ತಾ ಇದ್ದ ಅನ್ನ ಮಾಂಸ ತಿನ್ನಿಸೋ ಬಾಲುವನ್ನು ೨ ದಿನದಿಂದ ಕಾಣದೆ ಬೊಗಳುತ್ತಾ ಇದ್ದುವು. ಬಾಲುವಿನ ತಾಯಿ ಕಡ್ಡಿತುಂಡು ಮುರಿದಹಾಗೆ ಹೇಳಿದ್ದಳು "ನೀವೇನೂ ಇರೋನೊಬ್ಬ ಮಗನಿಗೆ ಮದ್ದುಮಾಡುಕ್ಕೆ ಹೋಗಬೇಡಿ ಅಂದ್ರೆ. ಊರಿಗೆ ಹೋಗಿ ಸರ್ಕಾರಿ ಡಾಕ್ಟರನ್ನ ಕರಕೊಂಡು ಬನ್ನಿ. ಅವರು ಹೇಳಿದಹಾಗೆ ಮಾಡೋಣ" ಅಂತ. ದೊಡ್ಡ ಡಾಕ್ಟ್ರು ವೈದ್ಯ ಸಮ್ಮೇಳನಕ್ಕೆ ಹೋಗಿದ್ದರು. ಈ ಸಂಜೆ ಬರುವ ನಿರೀಕ್ಷೆಯಿತ್ತು. ಬರುತ್ತಿದ್ದಹಾಗೆ ಅವರನ್ನು ಕರಕೊಂಡು ಬರಬೇಕು ಅಂತ ನ್ಯಾಯಾಧೀಶರೇ ಖುದ್ದಾಗಿ

ಹೋಗಿದ್ದರು ಡಾಕ್ಟರೂ ಬಂದರು ಬಂದು ನೋಡಿದರು " ಓದ್ದೋರು ಬರೆದೋರು ಇಷ್ಟುದಿವಸ ಯಾಕೆ ವಿಳಂಬಮಾಡಿದಿರಿ. ಡಿಫ್ತೀರಿಯಾ ಇದು. ಗಂಟಲು ಸಾಳಕ್ಕೆ ಹರಡಿದೆ. ತಕ್ಷಣ ಶಸ್ತ್ರಚಿಕಿತ್ಸೆ ಮಾಡಿ ಸಲೀಸು ಉಸಿರಾಡೋ ಹಾಗೆ ಮಾಡ ಬೇಕು. ಆ್ಯಂಟಿಟಾಕ್ಸಿನ್ ಇನ್ಜಕ್ಷನ್ ಕೊಡಬೇಕು ತಕ್ಷಣ ಆಸ್ಪತ್ರೆಗೆ ಕರಕೊಂಡು ಹೋಗೋಣ. ನಾವು ಮಾಡೋದೆಲ್ಲಾ ಮಾಡ್ತೀವಿ. ಮಿಕ್ಕಿದ್ದೆಲ್ಲ ದೇವರ ಕೈಯಲ್ಲಿ" ಎಂದು ಉದ್ವಾನೆ ಮುಖ ಮಾಡುತ್ತಾ ಹೇಳಿದರು.

ಶಸ್ತ್ರ ಚಿಕಿತ್ಸೆ ಆಯಿತು. ನ್ಯಾಯಾಧೀಶರ ಭಾವಮೈದ ಬೊಂಬಾಯಿನಲ್ಲಿ ಹೆಸರಾಂತ ಶಸ್ತ್ರ ವೈದ್ಯ ಅಕ್ಕನ ಮಗನ ಕಾಯಿಲೆ ಸುದ್ದಿ ಕೇಳಿ ವಿಮಾನದಲ್ಲಿ ಆತ ಬಂದಿಳಿದಿದ್ದ ಮಾರನೆಯ ದಿನ. ಎರಡುವಾರ ಅಕ್ಕನ ಮನೇಲೆ ಇದ್ದ. ಆಸ್ಪತ್ರೇಗೆ ಹೋಗಿ ಬಂದು ಅಕ್ಕ ಭಾವನಿಗೆ ಧೈರ್ಯ ಹೇಳ್ತಾ ಇದ್ದ. ಬಾಲುವಿಗೆ ಗುಣವಾಗಿ ಮನೆಗೆ ಬರೋತನಕ ಅಲ್ಲೇ ಇದ್ದು ಹೊರಡುವಾಗ " ಅಕ್ಕಾ! ನಿಮ್ಮೂರ ಡಾಕ್ಟರು ಬಲು ಶಹಣೆ ಇದ್ದಾರೆ. ಬಲು ನೈನವಾಗಿ ಆಪರೇಷನ್ ಮಾಡಿ ಚಿಕಿತ್ಸೆ ನಡೆಸಿದ್ದಾರೆ. ತುಂಬಾ ಅನುಭವಸ್ಥರು. ನಮ್ಮೂರಿನಲ್ಲಿದ್ದಿದ್ದರೆ ತಿಂಗಳಿಗೆ ಇಪ್ಪತ್ತು ಮೂವತ್ತು ಸಾವಿರ ಸಂಪಾದಿಸುತ್ತಾ ಇದ್ದರು. ಅವಕಾಶ ಆದಾಗ ಹಿಂತಿರುಗಿ ಬಂದು ಇವರಹತ್ತಿರ ನಾನೂ ಕೆಲವು ವಾರಗಳು ಇದ್ದು, ಕೆಲಸದ ನೈಪುಣ್ಯತೆಯನ್ನು ಕಲಿಯಬೇಕು. ಇಂತಹಾ ಡಾಕ್ಟರು ಸಿಕ್ಕಿದ್ದು ನಿಮ್ಮ ಪುಣ್ಯ" ಎಂದು ಹೇಳಿದರು.

* * * *

ಸರ್ಕಾರಿ ಡಾಕ್ಟರ ಮನೆಬಾಗಿಲಲ್ಲಿ ಅಮಾವಾಸ್ಯೆ ರಾತ್ರಿ ಒಂಭತ್ತು ಗಂಟೆಗೆ ಟಾಂಗಾ ಸಿದ್ಧವಾಗಿತ್ತು. ಪುಸಲಾಯಿಸುತ್ತಾ ಡಾಕ್ಟರು ತಮ್ಮ ಹೆಂಡತಿಯನ್ನು ಗಾಡಿಯಲ್ಲಿ ಕುಳ್ಳಿರಿಸಿ ಊರ ಉತ್ತರ ದಿಕ್ಕಿನ ಕಡೆಗೆ ಹೊರಟರು. ಉಚ್ಛಿಷ್ಟ ಗಣಪತಿ ಉಪಾಸಕರ ಮನೆಯ ಹತ್ತಿರ ಬಂದಾಗ ಟಾಂಗಾ ನಿಲ್ಲಿಸಹೇಳಿದರು. ಒಂಭತ್ತೂವರೆ ಗಂಟೆ ಆಗ. ಉಪಾಸಕರ ಮನೆಬಾಗಿಲು ತೆಗೆದಿತ್ತು. ಸ್ನಾನಮಾಡಿ ಕೆಂಪು ಮಗುಟ ಧರಿಸಿ ಹಣೆತುಂಬಾ ವಿಭೂತಿ ಕುಂಕುಮ ಬಳೆದಿದ್ದ ಉಪಾಸಕರು, ಗಾಡಿ ನಿಂತ ಶಬ್ದಕೇಳಿ ಒಳಗಿನಿಂದ ಬಾಗಿಲತನಕ ಬಂದಿದ್ದರು. ಸರ್ಕಾರಿ ಡಾಕ್ಟರನ್ನು ಕಂಡು "ಕರಕೊಂಡು ಬಂದಿದ್ದೀರಾ! ಬನ್ನಿ ಪೂಜೆಗೆ ಎಲ್ಲಾ ಅಣಿಮಾಡಿದ್ದೀನಿ. ಒಂದು ಝಾಮದ ಪೂಜೆ ಹಾಕಿದರೆ ಎಲ್ಲಾ ಸರಿಹೋಗುತ್ತೆ. ಕವಡೆ ಹಾಕಿ ನೋಡಿದ್ದೀನಿ. ಕವಡೆ ಸುಳ್ಳು ಹೇಳಿದ್ದೇ ಇಲ್ಲ" ಎಂದರು.

ಉಪಾಸಕರ ಹೆಂಡತಿಯೂ ಆ ಹೊತ್ತಿಗೆ ಬಂದು ಡಾಕ್ಟರ ಹೆಂಡತಿಯನ್ನು ಒಳಕ್ಕೆ ಕರೆದರು. ಸ್ವಲ್ಪದರಲ್ಲಿ ಒಳಕ್ಕೆ ಬರಲಿಲ್ಲ ಡಾಕ್ಟರ ಹೆಂಡತಿ. ನೀನು ಹೇಳಿದ ಮುತ್ತಿನ ಕುದುರೆ ಇವರ ಮನೇಲಿದೆ. ಅದಕ್ಕೇ ಇಲ್ಲಿಗೆ ಬಂದಿರೋದು. ಎಂದು ಡಾಕ್ಟರು ಅಂದಾಗ ಜಟ್ಟಂತ ಉಪಾಸಕರ ಮನೆಯೊಳಕ್ಕೆ ಆಕೆ ನುಗ್ಗಿದಳು. ಮುತ್ತಿನ

ಕುದುರೆ ಸಿಕ್ಕಿದರೆ ಅದನ್ನು ಹತ್ತಿದರೆ ಎಲ್ಲಾ ಸರಿಹೋಗುತ್ತೆ ಎಂದು ಆಕೆ ಹೇಳಲು ಶುರುಮಾಡಿದ್ದಳು.

ಒಂದು ಝೂವ ಪೂಜೆ ಹಾಕಿದರು. ರಂಗೋಲಿ ಚೌಕದಮೇಲೆ ಡಾಕ್ಟರ ಹೆಂಡತೀನ ಕೂರಿಸಿ, ಕೂತಿದ್ದ ಹಾಗೇ ಮೂರು ಕೊಡ ತಣ್ಣೀರು ಹಾಕಿ ನಾಲ್ಕು ಸಲ ಬೇವಿನ ಕೊಂಬೇಲಿ ಬಾರಿಸಿ ಐದುಸಲ ಆರತಿ ನೀವಾಳಿಸಿ ಆರುಸಲ ಹಚ್ಚಿದ ಊದು ಕಡ್ಡೀಲಿ ಚಿಟಿಕೆಹಾಕಿ ಏಳುಸಲ ಅಕ್ಷತೆ ಎರಚಿದ್ದಾಯ್ತು.

ರಾತ್ರಿ ಒಂದು ಗಂಟೆಯಾಗಿತ್ತು ಆ ಹೊತ್ತಿಗೆ. "ಈಗ ಕರಕೊಂಡು ಹೋಗಿ ಡಾಕ್ಟರೇ ಮೂರು ವಾರ ಈ ಪ್ರಸಾದಾನ ಕೊಡ್ತಾ ಇರಿ. ಖಂಡಿತವಾಗಿ ಕಾಯಿಲೆ ವಾಸಿಯಾಗುತ್ತೆ ಎಂದು ಉಪಾಸಕರು ಹೇಳಿದರು. ಡಾಕ್ಟರು ಹೆಂಡತಿಯನ್ನು ಹಿಡಿದು ನಡೆಸಿಕೊಂಡು ಒಂದು ಟಾಂಗಾದಲ್ಲಿ ಕುಳ್ಳಿರಿಸಿ ಮನೆಗೆ ಹೋದರು.

* * * *

ನಾಲ್ಕುವಾರಗಳಾಯ್ತು.

ಎರಡು ದೊಡ್ಡ ತಟ್ಟೇಲಿ ಹಣ್ಣು ಹೂವು ಇರಿಸಿಕೊಂಡು ಉಪಾಸಕರು ನ್ಯಾಯಾಧೀಶರ ಮನೆಗೆ ಕೊಡಲು ಹೋಗಿದ್ದರು. "ನಿಮ್ಮಿಂದ ನನ್ನ ಮಗಳಿಗೆ ಶೂಲೆ ಗುಣವಾಯ್ತು" ಅಂತ ಧನ್ಯವಾದ ಹೇಳಿ ಕಾಣಿಕೆ ಅರ್ಪಿಸಲು ಹೋಗಿದ್ದಾಗ ನ್ಯಾಯಾಧೀಶರು ಮನೆಯಲ್ಲಿರಲಿಲ್ಲ. ನ್ಯಾಯಾಧೀಶರ ಹೆಂಡತಿಗೆ ಸಮರ್ಪಿಸಿ ಬಂದರು.

ನ್ಯಾಯಾಧೀಶರು ಆಗ ಸರ್ಕಾರಿ ಡಾಕ್ಟರ ಮನೆಗೆ ತಟ್ಟೆತುಂಬಾ ಹಣ್ಣು ಬಾದಾಮಿಕಲ್ಲುಸಕ್ಕರೆ ಎರಡು ಬುಟ್ಟಿತುಂಬಾ ತರಕಾರಿ, ಒಂದು ಶಾಲು ಒಂದು ಸಾಧಾರಣ ಲಕ್ಕೋಟಿ ತೆಗೆದುಕೊಂಡು ಹೋಗಿದ್ದರು "ನಿಮ್ಮ ಜಾಣತನದಿಂದ ಇದ್ದೊಬ್ಬ ಮಗ ಬದುಕಿಕೊಂಡ ಎಂದು ಧನ್ಯವಾದ ಹೇಳಲು ಹೋಗಿದ್ದಾಗ ಸರ್ಕಾರಿ ಡಾಕ್ಟರು ಮನೆಯಲ್ಲಿರಲಿಲ್ಲ. ಅವರ ಹೆಂಡತಿಯ ಕೈಯಲ್ಲಿ ಕೊಟ್ಟು ಬಂದರು.

ಸರ್ಕಾರಿ ಡಾಕ್ಟರು ಅದೇ ಹೊತ್ತಿನಲ್ಲಿ ಉಚ್ಛಿಷ್ಟ ಗಣಪತಿ ಉಪಾಸಕರ ಮನೆಗೆ ಹೋಗಿದ್ದರು. ಬೆಳ್ಳಿ ರೂಪಾಯಿಗಳ ಚೀಲವೊಂದನ್ನೂ ಬೆಳ್ಳಿ ತಟ್ಟೆಯೊಂದನ್ನೂ ಹೂವು ಅರಿಸಿನಕುಂಕುಮ ಸೀರೆ ಕುಪ್ಪುಸ ಧೋತ್ರ ಶಲ್ಯ ತೆಗೆದುಕೊಂಡು ಉಪಾಸಕ ದಂಪತಿಗಳಿಗೆ ಕೊಡ ಹೋಗಿದ್ದಾಗ ಉಪಾಸಕರಿತ್ತಿಲ್ಲ. ಮನೆಯಲ್ಲಿದ್ದ ಉಪಾಸಕರ ಹೆಂಡತಿಗೆ ತಟ್ಟೆಯ ತುಂಬಾ ನಾಣ್ಯ ಪೇರಿಸಿಟ್ಟು ಉಡುಗೊರೆ ಗೊಟ್ಟು ನಿಮ್ಮ ಯಜಮಾನರ ಪೂಜಾ ಫಲದಿಂದ ನಮ್ಮನೆಯಲ್ಲಿ ಈಗ ದೇವರಿಗೆ ದೀಪ ಹಚ್ಚೋ ಹಾಗೆ ಆಗಿದ್ದಾಳೆ ನನ್ನಾಕೆ. ಎಂದು ಹೇಳಿ ಹಿಂತಿರುಗಿದರು.

—ಪ್ರಸಾದ್.

ಎತ್ತಿನ ಪತ್ರ

ಗೆಣೆಯಾ,

ಮೊನ್ನೆ ಬಾಳ ಮಜ ಮಜ ಸಂಗತಿ ನಡೀತು. ಇನ್ನೊಂದೆತ್ತಿನ ಜೊತೆ ನನ್ನನ್ನು ನೊಗಕ್ಕೆ ಬೀಳಿಸಿ, ನಿಲ್ಲಿಸಿ, ಚುನಾವಣೆಗೇ ನಿಲ್ಲಿಸ್ಬಿಟ್ಟಿದ್ದರು ಹಿಹಿಹಿ.

ಹೊಟ್ಟೇಗ್ಹಾಕ್ದೆ, ಊರಲ್ಲೆಲ್ಲಾ ಮೆರವಣಿಗೇಮಾಡಿ, ಓಡಿಸ್ನಾಡಿದ್ರು. ಕೋಡಿಗೆ ಕೆಂಪುಬಣ್ಣ ಬಳಿದಿದ್ರು ಬಿಳೀ ಟೋಪೀ ಹಾಕಿತ್ತಿಲ್ಲಾ. ಕಾಲಿಗೆಲ್ಲಾ ಗೆಜ್ಜೆಕಟ್ಟಿದ್ರು ಮೈಮೇಲೆ ಉಲ್ಲನ್ ರಗ್ ಹಾಕಿದ್ದರು. ಆದರೆ, ಹೊಟ್ಟೆಗೆ ಮಾತ್ರ ಏನೂ ಕೇಳ್ಬೇಡ.

ನನ್ನ ಚಿತ್ರಾನೆಲ್ಲಾ ತಮ್ಮ ಮೇಲೂ, ತಮ್ಮ ವಾಹನಗಳ ಮೇಲೂ, ಎಲ್ಲಾ ಎಲ್ಲಾ ಕ್ಯಾಲೆಂಡರ್‌ಗಳಮೇಲೂ ಪರರಮನೆ ಗೋಡೇ ಮೇಲೂ, ಸಂದಿ ಗೊಂದೀಲಿ ಛಾಪಿಸಿ, "ನನಗೇ" ಓಟು ಕೊಡಿ ಅಂತ ವದ್ರಾಡಿದ್ರು. ಮನೆ ಮನೇ ಮುಂದೀಗೆಲ್ಲಾ ನನ್ ಇಷಯ ಏಳ್ತಿದ್ರು. ನನ್ನೆಸರೇಳ್ತಾ ಹೊಟ್ಟೇ ತುಂಬಾ ಮೇಯೋರೆಲ್ಲಾ ಮೇದ್ರು. ನನಗೆ ಮಾತ್ರ ಹೊಟ್ಟೆಗ್ಹೊಟ್ಟ. ಸರ್ಕಲ್ ಹೋಟಲ್ಲಲ್ಲಿ ಒಂದು ಮಸಾಲೇನೂ ಇಲ್ಲ, ಹೋಗಲಿ ಮಸಾಲೇ ಇಲ್ಲದಿದ್ದರೆ, ಒನ್‌ಬೈಟೂ ಕಾಫೀನೂ ಬೇಡ್ವೆ?

ಅಲ್ಲಾ ಐದ್ ವರ್ಷಕ್ಕೊಮ್ಮೆ ನನ್ ನೆಪ್ ಬರ್ತೈತಿ ಇವರಿಗೆ. ಇನ್ನೊಂದ್ಸಲ ನನಗ್ಹೊಟ್ಟೇಗ್ಹಾಕ್ದೆ ನಿಲ್ಲಿಸ್ಲಿ—ನಿಲ್ತೀನಾ—ಹ್ಞ್—ಬಾಳಾ ತಗಾದೇ ಮಾಡ್ತೀನಿ, ತಂಟೆಕೊಡ್ತೀನಿ. ಮೇಲೇಳೋದೇ ಇಲ್ಲ. ಎದ್ರೆ ಒದೀತೀನಿ ಅಕಸ್ಮಾತ್ ಯಾರಾದರೂ ಮೆರವಣಿಗೆಗೆ ನನ್ನನ್ನು ಇನ್ನೊಂದೆತ್ತಿನ ಜೋಡೀಲಿ ಗಾಡೀಗೆ ಕಟ್ಟಿಳದ್ರೆ, ಊರಾಚೆ ಎಳ್ಕೊಂಡ್ ಹ್ವಾಾಾಾ ಗ್ಬಿಡ್ತೀನಿ!

ಗೆಣೆಯ ಜೋಕೆ ನೀನು ಮಾತ್ರ ಆ ಮೆರವಣಿಗೆ ಗಾಡೀಲಿ ಕುಂದ್ರಬೇಡ!

ಇನ್ನೈದು ವರ್ಷಕ್ಕೆ ಇನ್ನೊಂದು ಪತ್ರ ಬರೀತೀನಿ.

ಇತಿ

ನಿನ್ನೆತ್ತು

—ಹಾ. ಮ್ಯಾ. ಸೂರಿ

ತೋಳ ಚುನಾವಣೆಗೆ ಇಳಿದರೆ

ಆಳಿಗೊಂದು ರೂಪಾಯಿ ಕಸಿದುಕೊಂಡರಂತೆ!

ನಿದ್ರೆ ಬರದೆ ಇದ್ದ ಸಾಹುಕಾರರಿಗೆ
ಸುಲಭ ಚಿಕಿತ್ಸೆ

ಸಾಹುಕಾರ್ರೇ!

ನಿದ್ರೆ ಬರದೆ ಇದ್ದರೆ ಕಣ್ಣು ಮುಚ್ಚಿಕೊಂಡು ವರಮಾನ ತೆರಿಗೆ ಅಧಿಕಾರಿ ನಿಮ್ಮನೆಗೆ ಬಂದ ಅಂತ ಊಹಿಸಿಕೊಳ್ಳಿ. ನೀವು ಬೆವತು ಬೆದರಿ "ಏನು ಸ್ವಾಮಿ ಬೇಕಾಗಿತ್ತು. ಅಂಗಡೀಗೆ ಯಾಕೆ ಬರಲಿಲ್ಲ. ಇಲ್ಲಿಗೇಕೆ ಬಂದಿರಿ" ಎಂದು ಕೇಳಿದಿರಿ ಅಂತ ಅಂದುಕೊಳ್ಳಿ.

ಆಗ ಆತ "ರೇಷ್ಮೆ ವ್ಯಾಪಾರಿ ರಾಮದೇವರಯ್ಯನ ಮನೆ ಎಲ್ಲಿದೆ, ಅವನನ್ನು ದಸ್ತಗಿರಿ ಮಾಡಲು ಹೋಗ್ತಿದೇನೆ" ಎಂದು ಹೇಳಿದ ಅಂದುಕೊಳ್ಳಿ.

ರಾಮದೇವರಯ್ಯನೋರು ನಿಮ್ಮ ಮೇಲೆ ಪೈಪೋಟಿ ನಡೆಸಿದ ದಾಯಾದಿಗಳು ಅಂತಲೂ ಊಹಿಸಿಕೊಳ್ಳಿ. ಅವನ ಮನೆ ವಿಳಾಸವನ್ನೂ ಗುರುತನ್ನೂ ವರಮಾನ ತೆರಿಗೆಯವರಿಗೆ ಹೇಳಿ ಕಳಿಸಿದ್ರಿ ಅಂತಂದುಕೊಳ್ಳಿ—

ಸುಖವಾಗಿ ನಿದ್ರೆ ಬರುತ್ತೆ ಆಗ.



" ನನ್ನ ಗೆದ್ದಾಗಲಿಂದಲೂ ನಿಮಗೆ ಯಾವಾಗಲೂ ಗೆಲುವು "

ಗಾಂಪರ ಗುಂಪು

" ನಾಟಕ ಮಂದಿರಕ್ಕೆ "

೧

[ಲಂಡನ್ನಿನ ಪಿಕಡಿಲ್ಲಿಯ ರೀಜೆಂಟ್ ರಸ್ತೆ ಬದಿಗೆ ದೀಪದ ಕೆಳಗೆ ಗಾಂಪರೊಡೆಯರು ಶಿಷ್ಯರೊಡನೆ ನಿಂತಿದ್ದಾರೆ. ಸಂಜೆ ಏಳರ ಸಮಯ-ಹಿನ್ನಲೆಯಲ್ಲಿ ಗಡಿಯಾರ ಗಂಟೆ ಹೊಡೆಯುತ್ತದೆ-ತೆರೆ ಎದ್ದಾಗ ಗುರುಗಳು ಧ್ಯಾನಮಗ್ನರಾಗಿ ನಿಂತಂತೆ ದೀಪದ ಕಂಭದ ಕೆಳಗೆ ನಿಂತಿರುತ್ತಾರೆ. ಲಂಡನಿಯರು-ಇತರರೂ-ಹೆಣ್ಣು ಗಂಡುಗಳೂ-ನಾಯಿ ಹಿಡಿದ ವೃದ್ಧೆಯರೂ ಅದೇ ರಸ್ತೆಯಲ್ಲಿ ಆಗಾಗ ಹೋಗುತ್ತಿದ್ದಾರೆ.]

ಮಂಕ—ಮಡೆಯಾ, ಸಮಯ ಸವೆಯುತ ಬಂತು-ಗುರುವರರು ಅಂತರ್ಮುಖಿಗಳಾಗಿ, ಧ್ಯಾನದಿಂ ಇರ್ಪರ್.

ಮಡೆಯ—ಮಂಕನನ, ಅದ ನಾನು ಕಾಣಲಾರನೆ?-ಬಿಡಿಸಿ ಅಂಗೈ ಹುಣ್ಣಿಗೆ ಕನ್ನಡಿ ಹಿಡಿದವರುಂಟೆ?-ಗುರುಗಳ್‌ಗೆ ನಾವು ಹೇಳುವುದುಂಟೆ?-ಗುರುಚಿತ್ತ-ಎಚ್ಚೆತ್ತಾಗ, ನಾವು ಅವರ ಅಣತಿಯಂತೆ ಹಲ್ಲು ಗಿರಿಯಬೇಕಲ್ತೆ!

ಮರುಳ—ಅದುವೆ ಶಿಷ್ಯರ್ ಪುನೀತಮಾನ ಕರ್ತವ್ಯಮ್ಮೆ ಮಂಕ-ಅಂಗ್ರೇಜಿ ರಾಜಧಾನಿಯ, ರಾಜವೀಧಿಯಳಿ ಈ ಒಂದು ಚಳಿ ಸಂಜೆ ನಾವು ಪುಟ್‌ಪಾತಿನಲಿ ಹುಳಿ ಹುಳುಗಳಂತೆ ದೀಪ ದೀಪದ ಸುತ್ತ ಅಲೆಯುತ್ತ, ನಿಲ್ಲುತ್ತ, ಸಾಗುವುದು ನಮ್ಮ ವಿಧಿ ಮಡೆಯ-ಆದಕೇಕೆ ಚಿಂತಿಸುತ ಮಂಕರಂತಾಡಬೇಕು? ಮಂಕಾ ಗುರವರರು ಆವ ಧ್ಯಾನದಲಿರ್ಪರ್?

ಮಂಕ—ಸರಿಹೋಯ್ತು-ಇಂದು ಸೋಮವಾರವೆಂಬುದನು ಮರೆತೆಯಾ ಮರುಳಾ! ಗುರುವರರು ಸೋಮಧ್ಯಾನದಲಿರ್ಪರ್.

ಮಡೆಯ—ನೀಂಪೇಳ್ವದೇನ್-ಸೋಮಲತಾ ಧ್ಯಾನವೆಂದು ನಿನ್ನ ತರ್ಕವೇನ್.

ಮಂಕ—ನೀವಿನ್ನೂ ಏನೂ ಅರಿಯದ ಗಾಂಪರಲೆ!!-ಸೋಮ ಎಂದೊಡೇನು?

ಮರುಳ—ಸೋಮ ಎಂದೊಡೆ ತಿಳಿಯದೇ ನನಗೆ? ನಮ್ಮೂರ ಮೂರನೆ ಮನೆಯ ಸೋಮಸುಂದರನ ನಾಕಾಣೆನೆ?

ಮಡೆಯ—ಆ ಸೋಮ ಇಲ್ಲೀಕೆ ಬಂದ? ಮರುಳಾ-ಸೋಮ ಎಂದರೆ ಚಂದ್ರ ಬೆಳದಿಂಗಳ ಜನ್ಮದಾತ ಪ್ರೇಮಿಗಳ ಚಿತ್ತೋಹಾರಿ-ಚಕೋರಗಳ ಪ್ರೇಮ ಮೂರ್ತಿ.

ಮಂಕ—ಮಡೆಯನ ಮಂಡೆ ಒನಕೆಯಂತೆ ಚಿಗುರುತಿದೆ ಈಗೀಗ....ಕೊಂಚ ಈ ಬದಿಗೆ ಬನ್ನಿ. (ಧ್ಯಾನಾಸಕ್ತರಾಗಿ ಕಣ್ಣುಮುಚ್ಚಿ ನಿಂತ ಗುರು ಗಾಂಪರಿಂದ ದೂರ ಕರೆದೊಯ್ದು) ಕೇಳಿ ರೈ-ಚಂದ್ರನಿಗೆ ಸೋಮನೆಂಬರು ನಿಜ, ಆ ಸೋಮಮುಖಿ-ನಮ್ಮೂರ ಕವಿವರರ ಮಾತಿನ ಹೇಳಿದರೆ "ಇನ್ನೂ ಯಾಕೆ ಬರಲಿಲ್ಲ ಆಕಿ ಬಳ್ಳಿ ಅಂಥಾಕೀ?

ಮಡೆಯ—(ಗಟ್ಟಿಯಾಗಿ ನಕ್ಕು) ಓಹೊಹೊಹೊ....ಎಲ ಎಲ ಮಂಕ ಮಗನೇ.... ಆಂ....'ಹುಬ್ಬಳ್ಳಿಯವ' ಅಂದಂತೆ....ಏನು ತಲೆಯೋ ನಿಂದು-ಸಾವಿರದ ಲೊಂದು. ಬಳ್ಳಿ ಕುಂಬಳಬಳ್ಳಿ ಎಂದೆನ್ನು.

ಮರುಳ—ಸಾಕುಮಾಡಿರಯ್ಯ ನಿಮ್ಮ ವ್ಯಾಖ್ಯಾನ-ಗುರುವರ ಧ್ಯಾನಮೇನ್ ಎಂದು ತಿಳಿಸೈ ಎನೆ-ಏನೇನೊ ಹರಟುವಿರಿ-ಮಾತೇನೋ ಆಡುವಿರಿ-ಹೇಳಬಾರದೆ ಮಂಕ ಬಿಡಿಸಿ ಏನು ಧ್ಯಾನವಿದೆಂದು.

ಮಂಕ—ಕತ್ತಲಾಗುತ್ತಲಿದೆ-ಕಣ್ಮುಚ್ಚಿ ಚಂದ್ರಮುಖಿಯನೆ ನೆನೆಯೆ ಬೆಳಕು ಬಾರದೆ ಮನಕೆ? ಕೇಳೋ ಹೇ ಮರುಳರಾಯ-ಗುರುವರು ಚಿಂತಿಸುತಿಹರು-ಛೆ ಚಿಂತೆ ಎಂಬುದಕಿಂತ ಧ್ಯಾನ ಎಂಬುದು ಲೇಸು. ಸೋಮಲತಾ ಪಾನಮಾಧುರ್ಯ ದಂತಿರ್ಪ ಲತೆ-ಲತಾಂಗಿ ಮಡೆಯ ನಿನ್ನ ಸೂಕ್ಷ್ಮಮತಿಗೆ ಆಗ ಹೊಳೆದಂತೆ "ಕುಂಬಳ ಲತಾಂಗಿ"-ಗುರುವರರ ನೇತ್ರಗಳಿಗೆ ಆ ಮುಖಿ, ಚಂದ್ರಮುಖಿ ಸಂದೇಹವೇಕೆ? ಆ ಬಿಳಿರಂಗಿನ-ಲಿಪ್‌ಸ್ಟಿಕ್ಕ್ ತುಟಿಗಳ ಕುಂಬಳಾಂಗಿ ದೊರಸಾನಕ್ಕನ ಧ್ಯಾನದಲಿರ್ಪರ್ ಗುರುಗಳ್.

ಮರುಳ—ಅದುವೆ ಸೋಮಧ್ಯಾನಮೇ........ಗುರುಗಳಿಗೆ ಮೋಡಿ ಹಾಕಿದ ಮಾಯಾಂಗನೆಯ ಧ್ಯಾನ ನಿತ್ಯಧ್ಯಾನ ಮತ್ತೆ ಸೋಮಧ್ಯಾನವೆಂಬುದೇನ್ ಸ್ಪೆಶಲ್ ಇದರೊಳ್.

ಮಂಕ—ಬೃಹಸ್ಪತಿ ಬಾಯ್ ಮುಚ್ಚು-ಏನೆಂದೆ? ಬೃಹಸ್ಪತಿ ಎಂದೆನೇ ನಾನು-ಮಡೆಯ ಗುರುಗಳು ಸೋಮಮುಖಿ ಧ್ಯಾನದಲಿ ಎಂದೆಂಬುದಕಿಂತ-ಅವರೇ ಚಂದ್ರಾಮನಂತೆ ಶೋಭಿಸುತಿರ್ಪರ್, ಎಂದೆನ್ನಬೇಕು. ಬೃಹಸ್ಪತಿಯು ಧ್ಯಾನ ತಪಸ್ ಅರ್ಘ್ಯಗಳ ವಾಂತರದಲ್ಲಿ ಮುಳುಗಿರಲು ಚಂದ್ರ ತಾರೆಗೆ ಮಾರುಹೋದ ಪುರಾಣಕಥೆಯ ಮರೆತೆಯಾ? ಮಿಸೆಸ್ ಬೃಹಸ್ಪತಿ, ತಾರೆಗೆ, ಚಂದ್ರ-ಮನ, ತೂರಿಬಿಟ್ಟ ಕಥೆ ಅರಿಯೆಯಾ?

ಮಡೆಯ—ಅರ್ಥವಾಯ್ತು ಬಿಡು ಗುರುಚಂದ್ರರು ತಾರೆ ದೊರ್ಸಾನಿ ಮಾರು ಹೋದಂತೆ.

ಮರುಳ—ಮೆಲ್ಲಗೆ ಮಾತಾಡಿರೋ ಮಡೆಯ ಮಂಕರೆ ಗುರುಗಳಿಗೆ ಕೇಳಿಸೀತು.

ಮಂಕ—ದೊರಸಾನಿ ಬಂದು ಕೂಗುವತನಕ ಗುರುಗಳು ಧ್ಯಾನದಿಂದೆಚ್ಚತ್ತರೆ-ನೀ ಕೇಳಿದ್ದ ನಾ ಕೊಡುವೆ.

(ಅವಸರದಿಂದ ಮಡ್ಡಿ ಪ್ರವೇಶ)

ಮಡ್ಡಿ—ಸಾಕಪ್ಪ ಈ ಬಿಳಿಯರ ಬೃಹನ್ ಲಂಡನಿನ ವಾಸ-ದಾರಿತಪ್ಪಿ ನೀವು ಸಿಕ್ಕಿರೊ ಇಲ್ಲೋ ಎಂದು ಪರಿತಪಿಸುತ್ತಿದ್ದೆ.

ಮಂಕ—ಬಾ ಮಡ್ಡಿರಾಯ. ಉವಣಿಯ ಕಳಕೊಂಡು ಹುಡುಕಿದರೆ ಸಿಕ್ಕೀತೆ?-ದಾರಿ ತಪ್ಪಿದಮೇಲಾಯ್ತು ತಪ್ಪು ದಾರಿಯೇ ಗತಿ ಎಂದು ಧ್ಯಾನದಲಿ ನಿಂತರಾಯ್ತು ಅದಕೇಕೆ ಈಪಾಟಿ ಪರಿತಪಿಸಬೇಕು-ಮುಠ್ಠಾಳನೆಲ್ಲಿ?

ಮಡ್ಡಿ—ಅವನೊಬ್ಬ ಧಡ್ಡ. ವಿಂಡ್ ಮಿಲ್ಲು ನಾಟಕಶಾಲೆಯ ಬಳಿ ಸುಳಿಯುತಿದ್ದ. ಛಿ-ಅದೆಂತಹ ಅಸಯ್ಯ ನೃತ್ಯವದು!

ಮಂಕ—ಯಾವುದದು ನೃತ್ಯ-ಎಂತಹ ನಾಟ್ಯ?

ಮಡ್ಡಿ—ಅಲ್ಲ ಮಂಕ-ನಾಚಿಕೆಯ ಬಡಿದಟ್ಟಿ ಅರೆಬೆತ್ತಲೆಯ ಬಾಲೆಯರು ನರ್ತಿಸುತಿಹರು-ಈ ಮುಠ್ಠಾಳ-ನುಗ್ಗಿಯೇಬಿಟ್ಟ ಆ ಕ್ಲಬ್ಬಿಗೆ.

ಮಂಕ—ಕ್ಲಬ್ಬೆ ಅದು! ನಾಟಕವೆನ್ನುವಿ! ಕ್ಲಬ್ಬೆನ್ನುವಿ ಏನು ಅದು ಎಲ್ಲಿ ಅದು ಹೇಳಬಾರದೆ ಮಡ್ಡಿ.

ಮಡ್ಡಿ— ಲ್ಲೊಂದು ಬೋರ್ಡಿತ್ತು ಹವಾನಾ ಕ್ಲಬ್ಬೆಂದು ಇಣುಕಿದನು ಮುಠ್ಠಾಳ ಬಾಗಿಲಲಿ-ಅವನ ಕಾಲರು ಹಿಡಿದೆಳೆದು-ಮೂವತ್ತೈದು ಷಿಲಿಂಗುಗಳ ಕಸಿದು ದಬ್ಬಿದರು ಒಳಗೆ. ಅವನ ಎಳೆತರಲು ನಾನೂ ತೂರಿಹೋಗಿದ್ದೆ....ಛಿ-ಅಂತಹ ನಿವಸ್ತ್ರ ನೃತ್ಯ ನೋಡಬಾರದು ಮಂಕ-ನೋಡಬಾರದು. ಗುಂಪು ಗುಂಪಾಗಿ ರಂಗಮಂದಿರದ ಮೇಲೆ-ವಾದ್ಯ ಮೇಳದ ಜೊತೆಗೆ-ಮಾಟಾದ ಮೈಗೆ ಅರಿವೆಯ ಸೋಂಕು ಇಲ್ಲದೆಲೆ ಕುಣಿದರ್ರೈ ಆ ಸುಂದರಿಯರು. ಇನ್ನೊಂದು ಆಟವನು ನೋಡಿಯೇ ಬಹೆನೆಂದು ಕೂತಿಹನು ಮುಠ್ಠಾಳ ಆ ಕ್ಲಬ್ಬಿನಲ್ಲಿ.

ಮರುಳ—ಬನ್ನಿರೈ ಮುಠ್ಠಾಳನನು ಎಳೆತರುವ-ನಾವೆಯೇ ಆ ನೃತ್ಯ ಮಂದಿರಕೆ ನುಗ್ಗಿ ಆ ಭಡವನನು ಬಡಿದು ಹೊರ ಎಳೆದು ತರುವ.

ಮಡ್ಡಿ—ಉದ್ರೇಕ ಬೇಡ ಮರುಳ-ಅಲ್ಲಿಗೆ ನುಗ್ಗಿದೊಡೆ ನೀನೂ ಒಂದು ಆಟ ನೋಡಿಯೇ ಬರುವೆ-ಆಡಿದವರ ಪಾಪ ಮಾಡಿದವರಿಗೆ ಬಂದಡರಿದಂತಾಯ್ತು. ಗುರುಗಳೆಲ್ಲಿ?

ಮಂಕ — ಅಲ್ಲಿ ನೋಡು ಸೋಮಸುಂದರರಂತೆ ಧ್ಯಾನಾಸಕ್ತರಾಗಿ ಬೆಳಗುತಿಹರು. (ದೀಪದ ಕಂಭದ ಕೆಳಗೆ ನಿಂತ ಗುರುಗಳ ಮೇಲೆ ದಾರಿಯ ಮೋಟಾರು ದೀಪ ಇವರಮೇಲೆ ಬಿತ್ತೋ ಎಂಬಂತೆ ಫ್ಲಾಷ್ ಲೈಟೊಂದು ಗುರುಗಳನ್ನೂ ಬೆಳಗಿಸುವುದು ಕಣ್ಣು ಮುಚ್ಚಿ ವರದ ಹಸ್ತ ಅಭಯ ಹಸ್ತ ಮುದ್ರಿತರಾಗಿ

ಮಡ್ಡಿ — ಗುರುವರ್ಯ-ದಾರಿ ತಪ್ಪಿ ಎಲ್ಲೆಲ್ಲು ದೀಪಮಾಲೆ ಮಯವಾದ ಪಿಕೆಡೆಲ್ಲಿಯಲ್ಲಿ ಎಲ್ಲಿ ಹೋಗಲಿ-ಎತ್ತ ಹೋಗಲಿ ಎಂಬ ಗೊಂದಲದಿ ಸಿಲುಕಿ ತೊಳಲುತಿಹೆ-ದಾರಿ ತೋರ್ಪೆ. (ಮಂಡಿಯೂರಿ ಕೈಜೋಡಿಸುವನು)

(ಗುರುಗಳು ಮಿಸುಕಾಡಲಿಲ್ಲ)

ಮರುಳ — ಮಹಾತ್ಮ ಳ ಹೋಗಿರುವ ನಾಟ್ಯಶಾಲೆಯ ಹೆಸರು ಹೇಳು ಇಹಲೋಕಕ್ಕೆ ಬಂದಾರು.

ಮಡ್ಡಿ — ಬೇಡ ಬೇಡ ಅಲ್ಲಿಗೇ ಓಡಿಯಾರು-ಗುರುವರರು. ಭಾವೈಕ್ಯರಾದ ಇವರನ್ನು ಇಹಪ್ರಪಂಚಕ್ಕೆ ಅದೆಂತು ತಂದುವುದು!

ಮಂಕ — ನಾ ಬಲ್ಲೆ ಈ ಸೋಮಶೇಖರರು ಅದೆಂತು ತಪದಿಂದ ವಿಮುಕ್ತರಾಗಿ ನಿಜಜಗಕ್ಕೆ ಬರ್ಪರೆಂದು

ಮಡೆಯ — ಮತ್ತೆ ತಡವೇಕೆ ಅದೇನು ಮಂತ್ರ! ಹಾಕಿ ಮಾವಿನ ಕಾಯಿ ಉದುರಿಸಬಾರದೇ ಮಿತ್ರ.

ಮಂಕ — ಮಿತ್ರಾ ಮಡೆಯಾ-ಹಿಂದೆ ತಾರಕಾಸುರ ವಧೆಗೆ ಪುಟ್ಟಲಿಲ್ಲವೇ ನಮ್ಮ ಕುಮಾರಸ್ವಾಮಿ! ಮುರುಘರಾಜ!! - ಅಂತಿನ ತಪಕೆ ಭಂಗ ತಾರಲು ಬೇಕಿದ್ದನೊಬ್ಬ ಮನುಮಥನೆಂಬ ಮಹಾತ್ಮಕ್ಕ.

ಕುರುಳ — ಯಾವುದೋ ಪುರಾಣದ ಕಥೆಯ ತೆಗೆದ-ಎಲೈ ಗಾಂಪರಿರಾ ನಾವೀಗ ಹೊರಡಬೇಕು-ಸಂಜೆ ಏಳೂವರಗೆಲ್ಲ ನಾಟಕ ಪ್ರಾರಂಭವಲ್ಲವೆ-ಗುರುವರರು ಹೀಗೆ ಮುಷ್ಕರ ಹೂಡಿದರೆ ಗತಿ ಏನು? ಲಂಡನ್ನ ರಸ್ತೆಯಲಿ ಬಹುಹೊತ್ತು ನಿಂತಲ್ಲಿ ಪೋಲೀಸರೇ ಬಂದು ವ್ಯಾನು ಹತ್ತಿಸುವರು.

ಮಂಕ — ಸುಮ್ಮನಿರೋ ಮರುಳ-ನಮಗೇನು ತಿಳಿಯದೇ ಈ ವಿಷಯ-ಅಂಬಾಸೆಡರ್ ನಾಟಕ ಮಂದಿರಕ್ಕೆ ಹೋಗಬೇಕೀಗ-ದೀಪದಾ ಬೆಳಕಿನಲಿ ದಿಕ್‌ತಪ್ಪಿ ಆ ಥೇಯೇಟರೇ ಸಿಗದೆ ತಬ್ಬಿಬ್ಬಾಗಿ ಅಲೆಯುತಿಹೆವು—ದೊರಸಾನಕ್ಕನಿಗೆ ಪೋನು ಮಾಡಲಿಲ್ಲವೇ ಗುರುಗಳು! ಈಗ ನೋಡು ಚಮತ್ಕಾರ. (ತದೇಕಚಿತ್ತರಾಗಿ ನಿಂತ ಗಾಂಪರ ಗುರುಗಳ ಬಳಿ ತೆರಲಿ ಗಟ್ಟಿಯಾಗಿ) "ಹೇಯ್ ಗುರುವೇ-ದಯತೋರಿ ಕಣ್ ತೆರೆದು ದಾರಿತೋರಿ-ದೊರ್ಸಾನಿ ಬಂದಿಹಳು" (ಹಾಗೆಂದ ಕೂಡಲೆ ಗುರುಗಳು ವರದ-ಅಭಯ ಹಸ್ತಗಳನ್ನು ಸಡಿಲಿಸಿ-

ಮೆಲ್ಲಗೆ ಕಣ್ಣು ಬಿಟ್ಟು ಮುಖದಲ್ಲಿ ಕ್ರಮವಾಗಿ ನಗೆಮೂಡಿಸಿ ಕಡೆಗೆ ಹಲ್ಲು ಗಿರಿದು ನೋಡುವರು)

ಗುರುಗಳು—ಎಲ್ಲಿ ಹೇಳು ಮಂಕ!

ಮಂಕ—" ಬಹೆನೆಂದು ಹೇಳಿದಳಂತೆ "

ಗುರುಗಳು—ಯಾರೊಡನೆ! ಯಾವಾಗ!

ಮಂಕ—ಬೆ.. ಬೆ....ಬೊಗಳೊ ಮರುಳೂ....

ಮರುಳ—ಬೌ-ಬೌ-ಬೌ.

ಮಂಕ—ಭಡವ-ನಾಯಿಯಂತೆ ಅಲ್ಲ ಬೇಗ ಹೇಳು ಇಲ್ಲದೊಡೆ ಮತ್ತೆ ತಪಸ್ಸಿಗೆ ನಿಂತಾರು ಯತಿಗಳು.

ಮರುಳ—ಫೋನು ಮಾಡಿದ್ದೆ ನಾನು ಮತ್ತೆ ಗುರುವೆ ಪಿಕೆಡೆಲ್ಲಿ ಕಾಮಣ್ಣ ವಿಗ್ರಹದ ಬಳಿ ನಿಂತಿರಲು ಹೇಳಿಹಳು.

ಗುರುಗಳು—ಮತ್ತೆ ನಡೆಯಿರಿ-ನಾವಿಲ್ಲಿ ರೀಜೆಂಟು ಸ್ಟ್ರೀಟಿ ಸೀಟಿ ಹೊಡೆಯುತಲಿರಲು ಆ ಸುವಾಸಿನಿಗೆಂತು ತಿಳಿದೀತು? ನಡಿಯಿರೈ ಬಾಲರಿರ.

ಮಂಕ—(ದೂರದಿಂದ ಸ್ಯೈಡ್ ವಿಂಗ್ ಕಡೆ ನೋಡಿ) ನೋಡಿ ಗುರುವೇ-ಅಲ್ಲಿ ಆ ಬಿಲ್ಲು ಹಿಡಿದ ಬಾಲಕ ಏರೋಸ್ ವಿಗ್ರಹದ ಬಳಿ ಗ್ರಾಹ ಹಿಡಿದ ಗ್ರಿಹಿಣಿಯಂತೆ ಎಳೆಯ ಬೂದುಗುಂಬಳದಂತೆ ಶೋಭಿಸುತ ನಿಂತಿರ್ಪಳ್ ದೊರ್ಸಾನಿ.

ಗುರುಗಳು—(ಆ ಕಡೆಯೇ ನೋಡಿ) ಎಲ್ಲಿ-ಈ ಹಾಳು ಕಣ್ಣು ಕುಕ್ಕುವ ದೀಪಗಳಲ್ಲಿ ಕುರುಡನಂತೇ ಆಗಿರುವೆ-ಎಲ್ಲಿ ಆ ನನ್ನ ದೊರ್ಸಾನಿ ಎಲ್ಲಿ?

ಮಂಕ—ಗುರುಗಳೇ ಚಾಲೀಸು ವರ್ಷ ಚಲೇಗಯ-ಚಾಳೇಶ್ವರಿಯು ಬಂದಡರಿಹಳು ನಿಮ್ಮ ನೇತ್ರಗಳಿಗೆ-ಹಳೆಯ ಸುಲೋಚನವ ಕಿತ್ತೊಗೆದು ನೇತ್ರ ಪರೀಕ್ಷೆಯಂಗೆಯ್ದು ಬೇರೆ ಬಡಾ ಕನ್ನಡಕವ ಧರಿಸಿ ನೋಡಿದರೆ ಕಂಡೀತು ಕನ್ನಡಿಗರೇ........

ಮರುಳ—ಆಹಾ ಗುರುಗಳೇ ನಿಯಾನುಲೈಟಿನಲಿ ಬಣ್ಣದ ಬೊಂಬೆಯಂತೆ ಕಾಯುತ್ತ ನಿಂತಿಹಳು ದೊರ್ಸಾನಕ್ಕ-" ಕಾದಿರುವಳು ದೊರ್ಸಾನಿ-ಗುರುವು ಬರುವನೆಂದು "

ಗುರುಗಳು ಎಲ್ಲಿ-ಎಂತಹ ವರ್ಣನೆ ನಿಮ್ಮದು ನೋಡಿದರೂ ಕಾಣದ ಕಪೋತಿಯಂತಿರ್ಪನಲ್ಲಾ—

ಮಡ್ಡಿ—ಗುರುಗಳೇ-ಮುತ್ತಾಳ ಇನ್ನೂ ಆ ಹವಾನಾ ಕ್ಲಬ್ಬಿನಲ್ಲೇ ಇಹನು ಕರೆತರಲೆ.

ಗುರುಗಳು—ನೀನೂ " ಹವಾ " ಆಗಿ ಹೋಗು-ನನಗೀಗ EROS ಕಾರಂಜಿಯ ಬಳಿ ಕರೆದೊಯ್-ಹೊತ್ತಾಯ್ತು-ನಾಟಕಶಾಲೆಯಲ್ಲಿ ಮಂದಿ ತುಂಬಿ

ಜಾಗವಿಲ್ಲೆಂದು ಬಡಿದಟ್ಟಿಯಾರು. ಅಂಬಾಸಿಡರ್ ಥೇಯೇಟರಿಗೆ-ಕರೆದೊಯ್ಯರ್ರಿ ನನ್ನನಾ ದೊರ್ಸಾನಿ ಬಳಿ ಕರೆದೊಯ್ಯಿರ್ರಿ ಶಿಷ್ಯರಿರಾ....

(ಉದ್ವೇಗದಿಂದ ಹೊರಡಲು ಆತರರಾಗಿರುವರು)

ಮಂಕ—ನಡೆ ಮುಂದೆ-ನಡೆ ಮುಂದೆ ಕನ್ನಡದ ಗುರುವೇ....ಮಂಕಾದ ಮನಕೆ ದೀಪದ ಬೆಳಕು ಬೆಳಗಲಿ ಮುಂದೆ–ನಡೆ ಗುರುವೆ ನಡೆ ಗುರುವೆ ನಾಟಕ ಮಂದಿರಕೆ-ನಡೆ ಗುರುವೆ ದೊರೆಸಾನಿ ಇರುವೆಡೆಗೆ ಬೇಗ.

(ಎಲ್ಲರೂ ಗುರುಗಳನ್ನು ಮುಂದೆ ಮಾಡಿಕೊಂಡು ಹೊರಡುವರು)

—ತೆರೆ—

—ದಾಶರಥಿ ದೀಕ್ಷಿತ್



"ಒಡವೆಗಳನ್ನೆಲ್ಲಾ ಗಿರವಿ ಬಿಡಿಸಿಕೊಂಡು ಬರುವವರೆಗೂ ಮನೆಯೊಳಗೆ ಕಾಲಿಡಬೇಡ"

Statement about ownership and other particulars about newspaper **KORAVANJI** to be published in the first issue every year after last day of February.

FORM IV

(SEE RULE 8)

1.	Place of Publication	BANGALORE
2.	Periodicity of its publication...	MONTHLY
3.	Printer's Name	SRI. B. SREENIVASA IYENGAR
	Nationality	HINDU
	Address	COTTONPET, BANGALORE.
4.	Publisher's Name	SRI B. N GUPTA
	Nationality	HINDU
	Address	C/o KORAVANJI, BANGALORE-9
5.	Editor's Name	M. SIVARAM
	Nationality	HINDU
	Address	PROPRIETOR, KORAVANJI, BANGALORE-9.
6.	Names and address of individuals who own the newspapers and partners or shareholders holding more than one per cent of the total capital	M. SIVARAM Sole Proprietor KORAVANJI BANGALORE-9

I, M. SIVARAM, hereby declare that the particulars given above are true to the best of my knowledge and belief.

M. SIVARAM

Date 28-2-62 *For Signature of Publisher*

ಈಗ ಪ್ರಕಟವಾಗಿವೆ : ಮಾರ್ಚಿ ತಿಂಗಳ ಹೊಸ ಪುಸ್ತಕ

ಎರಡು ಸುದರ್ಶನ ಪ್ರಕಟನೆಗಳು

ಕೃಷ್ಣಮೂರ್ತಿ ಪುರಾಣಿಕರ

ಮಂದಾರ ಮಂದಾಕಿನಿ

ತ್ರಿವರ್ಣ ಮುಖಚಿತ್ರ : : ಬೆಲೆ: ಮೂರು ರೂಪಾಯಿ

● ● ● ● ●

ನಾ. ಕಸ್ತೂರಿಯವರ

ಚೈನಾ ಜಪಾನ್ ಪ್ರಸಿದ್ಧ ಕತೆಗಳು

ತ್ರಿವರ್ಣ ಮುಖಚಿತ್ರ : : ಬೆಲೆ: ಒಂದೂವರೆ ರೂಪಾಯಿ

● ● ● ● ●

ನಮ್ಮ ಮಾರಾಟದ ವ್ಯವಸ್ಥೆಗೆ ಒಳಪಟ್ಟ ಈ ತಿಂಗಳ ಹೊಸ ಕೃತಿಗಳು

ನಿರಂಜನರವರ

ಸಂಗಮ ಸ್ನಾನ

೧.೫೦

★

ಎಲ್. ನರಸಿಂಹಯ್ಯರ

ಬೊಮ್ಮನ ಬುರುಡೆ

೨.೨೫

ಇತ್ತೀಚಿನ ಪ್ರಕಟನೆಗಳು

ಪ್ರೊ. ಸೂ. ಶೇ. ಅವರ

ಸಂಚಿಯ ಹೊನ್ನಮ್ಮ

೨.೦೦

★

ಎಲ್. ನರಸಿಂಹಯ್ಯ ವಿರಚಿತ

ಚಂಚಲೆಯ ಚಪಲ

೨.೦೦

ಎಲ್. ನರಸಿಂಹಯ್ಯ ವಿರಚಿತ

ಪ್ರೇಮವಿಲ್ಲದ ಪಕ್ಷಿ

೧.೫೦

ಅಂಚೆಯಲ್ಲಿ ಅಪೇಕ್ಷಿಸುವವರು ಮುಂಗಡ ಹಣ ಕಳಿಸಬೇಕು
ಅಂಚೆ ವೆಚ್ಚ ಪ್ರತ್ಯೇಕ.

— ಸುದರ್ಶನ ಪ್ರಕಾಶನ —

ತಾರಾ ನಿವಾಸ : : ತಿಪಟೂರು.

Statement about ownership and other particulars about newspaper **KORAVANJI** to be published in the first issue every year after last day of February.

FORM IV

(SEE RULE 8)

1.	Place of Publication	BANGALORE
2.	Periodicity of its publication...	MONTHLY
3.	Printer's Name	SRI. B. SREENIVASA IYENGAR
	Nationality	HINDU
	Address	COTTONPET, BANGALORE.
4.	Publisher's Name	SRI B. N GUPTA
	Nationality	HINDU
	Address	C/o KORAVANJI, BANGALORE-9
5.	Editor's Name	M. SIVARAM
	Nationality	HINDU
	Address	PROPRIETOR, KORAVANJI, BANGALORE-9.
6.	Names and address of individuals who own the newspapers and partners or shareholders holding more than one per cent of the total capital	M. SIVARAM Sole Proprietor KORAVANJI BANGALORE-9

I, M. SIVARAM, hereby declare that the particulars given above are true to the best of my knowledge and belief.

M. SIVARAM

Date 28-2-62 *For Signature of Publisher*

ಈಗ ಪ್ರಕಟವಾಗಿವೆ : ಮಾರ್ಚಿ ತಿಂಗಳ ಹೊಸ ಪುಸ್ತಕ

ಎರಡು ಸುದರ್ಶನ ಪ್ರಕಟನೆಗಳು

ಕೃಷ್ಣಮೂರ್ತಿ ಪುರಾಣಿಕರ

ಮಂದಾರ ಮಂದಾಕಿನಿ

ತ್ರಿವರ್ಣ ಮುಖಚಿತ್ರ : : ಬೆಲೆ: ಮೂರು ರೂಪಾಯಿ

● ● ● ● ●

ನಾ. ಕಸ್ತೂರಿಯವರ

ಚೈನಾ ಜಪಾನ್ ಪ್ರಸಿದ್ಧ ಕತೆಗಳು

ತ್ರಿವರ್ಣ ಮುಖಚಿತ್ರ : : ಬೆಲೆ: ಒಂದೂವರೆ ರೂಪಾಯಿ

● ● ● ● ●

ನಮ್ಮ ಮಾರಾಟದ ವ್ಯವಸ್ಥೆಗೆ ಒಳಪಟ್ಟ ಈ ತಿಂಗಳ ಹೊಸ ಕೃತಿಗಳು

ನಿರಂಜನರವರ

ಸಂಗಮ ಸ್ನಾನ

೧.೫೦

★

ಎಲ್. ನರಸಿಂಹಯ್ಯರ

ಬೊಮ್ಮನ ಬುರುಡೆ

೨.೨೫

ಇತ್ತೀಚಿನ ಪ್ರಕಟನೆಗಳು

ಮ್ಯ. ಸೂ. ಶೇ. ಅವರ

ಸಂಚಿಯ ಹೊನ್ನಮ್ಮ

೨.೦೦

★

ಎಲ್. ನರಸಿಂಹಯ್ಯ ವಿರಚಿತ

ಚಂಚಲೆಯ ಚಪಲ

೨.೦೦

ಎಲ್. ನರಸಿಂಹಯ್ಯ ವಿರಚಿತ

ಪ್ರೇಮವಿಲ್ಲದ ಪಕ್ಷಿ

೧.೫೦

ಅಂಚೆಯಲ್ಲಿ ಅಪೇಕ್ಷಿಸುವವರು ಮುಂಗಡ ಹಣ ಕಳಿಸಬೇಕು
ಅಂಚೆ ವೆಚ್ಚ ಪ್ರತ್ಯೇಕ.

— ಸುದರ್ಶನ ಪ್ರಕಾಶನ —


ತಾರಾ ನಿವಾಸ : : ತಿಪಟೂರು.



For 3 way Beauty Treatment....
RAJA
SNOW
MANYAM & CO
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY

REG NO. B. G. 343 KORAVANJI MAR. 1962.

Increase Output



INSTALL

Kirloskar

ESTD. 1888

CENTRIFUGAL
PUMPING SETS

Built for rugged and continuous service, KIRLOSKAR pumpsets feature the latest in design development. Increasingly popular in irrigation projects, these pump-sets combine trouble-free service and low maintenance costs. Available in different types and sizes.

For Particulars :

KIRLOSKAR BROTHERS, LTD.,

SRI NARASIMHARAJA ROAD

Post Box 606 : : BANGALORE-2

Printed by B. S. Iyengar, Bangalore City
Publisher—B. N. Gupta. Editor—M. Sivaram